ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜುಲೈ 2017 ಮಾಸ ಪತ್ರಿಕೆ

ಸಂಪುಟ : 39
ಸಂಚಿಕೆ : 10
ಪುಟ : 12
ಬೆಲೆ : ₹ 10/–



## ಲೋಕಮಾನ್ಯ ಬಾಲಗಂಗಾಧರ ತಿಲಕ್

ಸ್ವಾತಂತ್ರ್ಯ ನನ್ನ ಜನ್ಮ ಸಿದ್ಧ ಹಕ್ಕು
ಎಂದು ಘೋಷಿಸಿದ ಮಹಾನ್ ನಾಯಕ

## ಉಧಮ್ ಸಿಂಗ್

ಮಹಾನ್ ಕ್ರಾಂತಿಕಾರಿ

ವಿವರ : ಪುಟ 10 ರಲ್ಲಿ

ಸೋದರತೆಯ ಬಾಂಧವ್ಯ ಬೆಸೆಯುವ ರಕ್ಷಾಬಂಧನ 4

ವಚನಗಳಲ್ಲಿ ಮೌಲ್ಯಗಳು 6

A Journal of Karnataka State Secondary Teachers' Association

# ಸಂಪಾದಕೀಯ

ಜುಲೈ ತಿಂಗಳು ಮುಕ್ಕಾಲು ಕಳೆಯುತ್ತಿದೆ. ಶಾಲೆಗಳು ಆರಂಭವಾಗಿ ಸುಮಾರು 50 ದಿವಸಗಳಾಗಿವೆ. ಈ ವೇಳೆಗೆ ಶಾಲೆಗಳಲ್ಲಿ ಮೊದಲ ಕಿರುಪರೀಕ್ಷೆ ಮಾಡಲು ಅವಶ್ಯವಾದ ಪಾಠಗಳು ಮುಗಿದಿರಬೇಕು. ಆದರೆ ಕಿರುಪರೀಕ್ಷೆ ನಡೆಸಲು ಮಾತ್ರ ಶಿಕ್ಷಕರಿಗೆ ಗೊಂದಲದ ಪರಿಸ್ಥಿತಿ. ಕಾರಣ ಇನ್ನೂ ಕೆಲವು ಶಾಲೆಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಪಠ್ಯಪುಸ್ತಕಗಳು ವಿದ್ಯಾರ್ಥಿಗಳಿಗೆ ತಲುಪಿಲ್ಲ. ತಲುಪಿದ್ದರೂ ಅನೇಕ ಶಾಲೆಗಳಲ್ಲಿ ಪಠ್ಯಪುಸ್ತಕಗಳ ಭಾಗ 2ರ ಆವೃತ್ತಿ ತಲುಪಿಲ್ಲ. ಇಲ್ಲವೆ ಇನ್ನೂ ಕೆಲವು ಕಡೆ ಭಾಗ 2 ತಲುಪಿದ್ದರೂ ಭಾಗ 1 ಸರಬರಾಜಾಗಿಲ್ಲ. ಭಾಗ 1ರ ಪಠ್ಯಪುಸ್ತಕದಲ್ಲಿ ಮೊದಲ ಅರ್ಧವರ್ಷದ ಪಾಠಗಳೇ ಮುದ್ರಿತವಾಗಿದೆಯೆಂದೇನೂ ಇಲ್ಲ. ಪಠ್ಯಪುಸ್ತಕಗಳಲ್ಲಿ ಭಾಗ 1 ಮತ್ತು ಭಾಗ 2 ರಲ್ಲಿ ಮೊದಲ ಅರ್ಧವರ್ಷದ ಪಾಠಗಳು ಮೊದಲ ಭಾಗದಲ್ಲಿ, ಭಾಗ 2ರಲ್ಲಿ ಎರಡನೆಯ ಅವಧಿಯ ಪಾಠಗಳು ಮುದ್ರಣಗೊಳ್ಳದೆ ಎಲ್ಲ ಪಾಠಗಳು ಎರಡೂ ಭಾಗಗಳಲ್ಲಿ ಬೆರೆತಿವೆ. ಹಾಗಾಗಿ ಎರಡೂ ಭಾಗಗಳು ವಿದ್ಯಾರ್ಥಿಯ ಕೈ ಸೇರಿದರೆ ಮಾತ್ರ ಶಾಲೆಗಳಲ್ಲಿ ಶಿಕ್ಷಕರು ವ್ಯವಸ್ಥಿತವಾಗಿ ಪಾಠ ಮಾಡಿ, ಕಿರುಪರೀಕ್ಷೆ ಇತ್ಯಾದಿಗಳನ್ನು ನಡೆಸಲು ಸಾಧ್ಯ. ಈ ಗೊಂದಲಗಳ ಬಗ್ಗೆ ಅಧಿಕಾರಿಗಳು ಗಮನಹರಿಸದಿರುವುದರಿಂದ ಶಿಕ್ಷಕರು, ವಿದ್ಯಾರ್ಥಿಗಳು ಪರದಾಡುವಂತಾಗಿದೆ.

ಈ ವರ್ಷ ವಿದ್ಯಾರ್ಥಿಗಳ ಕೈಯಲ್ಲಿರುವುದು ಪರಿಷ್ಕೃತಗೊಂಡ ಪಠ್ಯಪುಸ್ತಕಗಳು. ಅಂದರೆ ಈ ಹಿಂದೆ ಇದ್ದ ಪಠ್ಯಪುಸ್ತಕಗಳಲ್ಲಿನ ದೋಷಗಳೆಲ್ಲ ತಿದ್ದಲ್ಪಟ್ಟ , ಸಮರ್ಪಕವಾದ ಪುಸ್ತಕ ಎಂದರ್ಥ. ವಿಪರ್ಯಾಸವೆಂದರೆ ಪರಿಷ್ಕೃತಗೊಂಡ ಪಠ್ಯಪುಸ್ತಕಗಳಲ್ಲಿ ಹೆಕ್ಕಿದಷ್ಟೂ ಲೋಪದೋಷಗಳೇ ಎದ್ದುಕಾಣುತ್ತಿದೆ. ಆ ದೋಷಗಳನ್ನೆಲ್ಲ ಪರಿಣತರು, ಪ್ರತಿಕೆಗಳು ಪಟ್ಟಿ ಮಾಡಿ ಜನರ ಮುಂದಿಟ್ಟಿದೆ. ಆದರೆ ಪಠ್ಯಪುಸ್ತಕ ಪರಿಷ್ಕರಣ ಸಮಿತಿಯ ಸರ್ವಾಧ್ಯಕ್ಷರು ಅವುಗಳನ್ನು ಒಪ್ಪಲು ಸಿದ್ಧರಿಲ್ಲ. ಕಾರಣ ಅವರ ಅಹಂಗೆ ಧಕ್ಕೆಯಾಗುವುದೆಂದೇನೋ. ಪರಿಷ್ಕರಣದ ಟೀಕೆಗಳಿಗೆಲ್ಲ ಅವರು ಸ್ಪಷ್ಟೀಕರಣ ಕೊಡುತ್ತಾ ತಾವು, ತಮ್ಮ ಸಮಿತಿ ಪಠ್ಯಪುಸ್ತಕ ಪರಿಷ್ಕರಣವನ್ನು ಸಮರ್ಪಕವಾಗಿ ಮಾಡಿದ್ದೇವೆ. ಕೆಲವು ಮುದ್ರಣದೋಷಗಳಿರಬಹುದು, ಅದನ್ನು ಸರಿಪಡಿಸಿ ಶಾಲೆಗಳಿಗೆ ಕಳುಹಿಸುತ್ತೇವೆ ಎಂದಿದ್ದಾರೆ. ಸುಮಾರು 30 ತಿಂಗಳ ಸುದೀರ್ಘ ಕಾಲ ಪರಿಷ್ಕರಣಗೊಂಡ ಪಠ್ಯಗಳಲ್ಲಿ ಮುದ್ರಣದೋಷವೂ ಸೇರಿದಂತೆ ಯಾವ ದೋಷಗಳೂ ಇರಬಾರದಲ್ಲವೇ ? ಅವರ ಹೇಳಿಕೆಯಂತೆ ಪಠ್ಯಪುಸ್ತಕಗಳಲ್ಲಿರುವುದು ಸಣ್ಣಪುಟ್ಟ ಮುದ್ರಣ ದೋಷಗಳಲ್ಲ, ಹೇರಳ. ಉದಾಹರಣೆಗೆ 10ನೆ ತರಗತಿಯ ದ್ವಿತೀಯ ಭಾಷೆ ಕನ್ನಡ ಪುಸ್ತಕದಲ್ಲಿ 31 ಕಾಗುಣಿತದ ತಪ್ಪುಗಳಿವೆ. ಇದು ಕೇವಲ ಒಂದು ಉದಾಹರಣೆ. ಉಳಿದಂತೆ ಇತರ ಪುಸ್ತಕಗಳಲ್ಲಿ ಎಷ್ಟು ದೋಷಗಳಿವೆಯೋ ? ಸಮಿತಿಯ ಸರ್ವಾಧ್ಯಕ್ಷರು ಹೇಳುವಂತೆ ಕೇವಲ ಮುದ್ರಣ ದೋಷಗಳಲ್ಲ, ನೀಡಿರುವ ಮಾಹಿತಿಯಲ್ಲೂ ವ್ಯತ್ಯಾಸ, ವೈರುಧ್ಯಗಳಿವೆ. ತಪ್ಪು ಮಾಹಿತಿಗಳನ್ನು ನೀಡಲಾಗಿದೆ. ಸಮಾಜ ವಿಜ್ಞಾನದ ಪಠ್ಯಗಳಲ್ಲಂತೂ ವಿಷಯಗಳನ್ನು ಮನಬಂದಂತೆ ತಿರುಚಿರುವುದು ಕಂಡುಬರುತ್ತದೆ. ಅಂತೆಯೇ ಗಣಿತ, ವಿಜ್ಞಾನ ವಿಷಯಗಳಲ್ಲೂ ಕೂಡ ತಪ್ಪು ಮಾಹಿತಿಗಳನ್ನು ನೀಡಲಾಗಿದೆ.

ಪಠ್ಯಪುಸ್ತಕಗಳಲ್ಲಿರಬಹುದಾದ ದೋಷಗಳನ್ನು ಗುರುತಿಸಿ, ದೋಷಗಳನ್ನು ಸರಿಪಡಿಸಲು ಇಲಾಖೆ ಸಮಿತಿಗಳನ್ನು ರಚಿಸಿದೆ ಎಂದು ಹೇಳಲಾಗುತ್ತಿದೆ. ಈ ಸಮಿತಿಗಳು ಕೇವಲ ಅಲ್ಲೊಂದು ಇಲ್ಲೊಂದು ಮುದ್ರಣ ದೋಷಗಳನ್ನು ಪತ್ತೆಹಚ್ಚಿ, ತೇಪೆ ಹಾಕುವ ಕೆಲಸ ಮಾಡದೆ, ಸಮಗ್ರವಾಗಿ ಪರಿಶೀಲಿಸಿ ಮುದ್ರಣಲೋಪ, ವಿಷಯ ಲೋಪ ಹಾಗೂ ಯಾವುದೇ ರೀತಿಯ ಲೋಪಗಳಿಲ್ಲದ ಸಮರ್ಪಕವಾದ ಪಠ್ಯಪುಸ್ತಕಗಳನ್ನು ನೀಡುವುದು ಅತ್ಯವಶ್ಯಕ. ಮಕ್ಕಳ ಶಿಕ್ಷಣದ ವಿಚಾರದಲ್ಲಿ ವೈಯುಕ್ತಿಕ ಪ್ರತಿಷ್ಠೆ, ವಿಚಾರ, ಅಹಂಗಳನ್ನು ದೂರವಿಟ್ಟು ವಿದ್ಯಾರ್ಥಿಗಳ, ಶಿಕ್ಷಣದ ಒಳಿತಿಗಾಗಿ ಕೆಲಸ ಮಾಡುವುದು ಅತ್ಯಂತ ಅಗತ್ಯವಲ್ಲವೇ ?

ಸಂಪಾದಕರು

## ಸೂಕ್ತಿ



ವಿಪದಿ ಧೈರ್ಯಮಥಾಭ್ಯುದಯೇ ಕ್ಷಮಾ
ಸದಸಿ ವಾಕ್ಪಟುತಾಯುಡಧಿವಿಕ್ರಮಃ ।
ಯಶಸಿ ಚಾಭಿರುಚಿಃ ವ್ಯಸನಂ ಶ್ರುತಾ
ಪ್ರಕೃತಿಸಿದ್ಧಮಿದಂ ಹಿ ಮಹಾತ್ಮನಾಮ್ ॥

ಕಷ್ಟದ ಪರಿಸ್ಥಿತಿಯಲ್ಲಿ ಧೈರ್ಯವು ಜಾಗೃತವಾಗುತ್ತದೆ. ಉನ್ನತಿ ಹೊಂದುತ್ತಿರುವಾಗ ಕ್ಷಮಾಗುಣವು ಬೆಂಬಲ ಕೊಡುತ್ತದೆ. ಸಭೆಯಲ್ಲಿ ಮಂಡಿತರಾದಾಗ ವಾಕ್ಪ್ರವಾಹವು ಹರಿಯುತ್ತದೆ. ಯಶಸ್ಸಿನ ಉತ್ತುಂಗದಲ್ಲಿರುವಾಗ ಸತ್ಕಾರ್ಯಗಳಲ್ಲಿ ಪ್ರವೃತ್ತಿಯು ಇಮ್ಮಡಿಯಾಗುತ್ತದೆ. ಜ್ಞಾನವು ಸಂಪಾದನೆಯಾದಷ್ಟೂ ಪಠಣ-ಚಿಂತನಾದಿಗಳಲ್ಲಿ ಆಸಕ್ತಿಯು ಅಧಿಕವಾಗುತ್ತದೆ. ಇಂಥ ಉತ್ತಮ ಗುಣಗಳು ಮಹಾತ್ಮರಿಗೆ ಸ್ವಭಾವ ಸಿದ್ಧವಾಗಿರುತ್ತವೆ.

- ನೀತಿಶತಕ

b d

## ಪರಿವಿಡಿ


- ಎ.ಬಿ.ಆರ್.ಎಸ್.ಎಂ. ಮನವಿಗೆ ಸಚಿವರ ಸಕಾರಾತ್ಮಕ ಒಪ್ಪಿಗೆ 3
- ಸೋದರತೆಯ ಬಾಂಧವ್ಯ ಬೆಸೆಯುವ ರಕ್ಷಾಬಂಧನ 4
- ಸ್ತ್ರೀ ಶಕ್ತಿ 5
- ವಚನಗಳಲ್ಲಿ ಮೌಲ್ಯಗಳು 6
- ಸ್ವಾತಂತ್ರ್ಯದ ರಕ್ಷಣೆ – ನಮ್ಮ ಜವಾಬ್ದಾರಿ 7
- ಕರ್ನಾಟಕ ಸರ್ಕಾರದ ನಡವಳಿಗಳು 8
- ಶಿಕ್ಷಕ ಸಂಘಟನೆಯ ಭೀಷ್ಮ ಮುಕುಂದರಾವ್ ಕುಲಕರ್ಣಿ 11

# ಎ.ಬಿ.ಆರ್.ಎಸ್.ಎಂ. ಮನವಿಗೆ ಸಚಿವರ ಸಕಾರಾತ್ಮಕ ಒಪ್ಪಿಗೆ

■ ದೆಹಲಿ ವರದಿ

ಅಖಿಲ ಭಾರತ ಶೈಕಿಕ ಮಹಾಸಂಘದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿಗಳಾದ ಮಹೇಂದ್ರ ಕಪೂರ್‌ರವರ ನೇತೃತ್ವದಲ್ಲಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಜೆ.ಪಿ. ಸಿಂಘಾಲ್, ಸಹ ಸಂಘಟನಾ ಕಾರ್ಯದರ್ಶಿ ಡಾ॥ ಮನೋಜ್ ಸಿಂಹ ಮತ್ತು ಡಾ॥ ಅನುರಾಗ್‌ರವರನ್ನೊಳಗೊಂಡ ನಿಯೋಗವು ಇತ್ತೀಚೆಗೆ ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವಡೇಕರ್‌ರವರನ್ನು ಭೇಟಿ ಮಾಡಿ ಶಿಕ್ಷಕರ 20 ಸಮಸ್ಯೆಗಳ ಮನವಿಯನ್ನು ಸಲ್ಲಿಸಿತು. ಶಿಕ್ಷಕ ಸಮುದಾಯದ ಹಿತದೃಷ್ಟಿಯಿಂದ ಶಿಕ್ಷಕರ ಎಲ್ಲ ಸಮಸ್ಯೆಗಳನ್ನು ಪರಿಹರಿಸುವಂತೆ ಕೋರಲಾಯಿತು.

ಶಿಕ್ಷಕ ಸಮುದಾಯದ ಹಿತದೃಷ್ಟಿಯಿಂದ ನಿಯೋಗವು ಸಲ್ಲಿಸಿದ ಮನವಿಯಲ್ಲಿನ ಬಹುತೇಕ (12) ಸಮಸ್ಯೆಗಳನ್ನು ಪರಿಹರಿಸಲು ಕೂಡಲೇ ಒಪ್ಪಿಗೆ ಕೊಟ್ಟಿದ್ದು ಅಂತಿಮ ಆದೇಶ ಸದ್ಯದಲ್ಲೇ ಹೊರಬೀಳಲಿದೆ ಎಂದು ತಿಳಿಸಲು ಸಂತೋಷಿಸುತ್ತೇವೆ. ಉಳಿದ ಸಮಸ್ಯೆಗಳನ್ನೂ ಬಗೆಹರಿಸುವ ಪ್ರಯತ್ನಮಾಡುವುದಾಗಿ ಸಚಿವರು ಭರವಸೆ ನೀಡಿರುತ್ತಾರೆ. ಮಾನ್ಯ ಸಚಿವರು ಪರಿಹರಿಸಲಿರುವ ಸಮಸ್ಯೆಗಳು ಹೀಗಿದೆ:

1. 7ನೇ ವೇತನ ಆಯೋಗದ ಪರಿಷ್ಕೃತ ಸಮಿತಿಯ ವರದಿಯನ್ನು ಸಚಿವ ಸಂಪುಟದ ಮುಂದೆ ಮಂಡಿಸಲಾಗುತ್ತದೆ ಮತ್ತು ಶೀಘ್ರದಲ್ಲಿಯೇ ಪ್ರಕಟಿಸಲಾಗುತ್ತದೆ.
2. 6ನೇ ವೇತನ ಆಯೋಗದ ಪರಿಷ್ಕರಣ ಸಮಿತಿಯಲ್ಲಿನ ಬಹತೇಕ ವ್ಯತಿಕ್ರಮ (Anamalies)ಗಳನ್ನು ನಿವಾರಿಸಲಾಗಿದೆ. ಮತ್ತೂ ಏನಾದರೂ ಅಂಶಗಳು ಉಳಿದಿದ್ದರೆ ಅವುಗಳನ್ನೂ ಸಹ ನಿವಾರಿಸಲಾಗುವುದು. ಆರ್ಥಿಕ ಹಾಗೂ ವ್ಯತಿರಿಕ್ತಗಳಿಗೂ ಇದು ಅನ್ವಯವಾಗುವುದು.
3. ವಿವಿಧ ವಿಶ್ವವಿದ್ಯಾಲಯಗಳು ಮತ್ತು ಕಾಲೇಜುಗಳ ನಡುವೆ ಇರುವ faculty ಗಳ mobility / portability ಯನ್ನು ಪುನರುಜ್ಜೀವಿಸಲು 2004ರ ಪೂರ್ವ ಪಿಂಚಣಿ ಯೋಜನೆಯನ್ನು ಪರಿಷ್ಕರಿಸಲಾಗುವುದು. ಈ ವಿಷಯಕ್ಕೆ ಸಂಬಂಧಿಸಿದಂತೆ ಸಚಿವಾಲಯವು ತೀವ್ರ ಗಮನ ಹರಿಸುವುದು. ಈ ತಾರತಮ್ಯ ನಿವಾರಣೆಗೆ ಕೇಂದ್ರವನ್ನು ಎಬಿಆರ್‌ಎಸ್‌ಎಂ ಹೆಚ್ಚು ಒತ್ತಾಯಿಸಿದೆ.
4. ಭಾರತದಾದ್ಯಂತ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಸೇವಾ ನಿವೃತ್ತಿ ವಯಸ್ಸನ್ನು 65ಕ್ಕೆ ನಿಗದಿಗೊಳಿಸಬೇಕು.
5. Ad-hac ಹುದ್ದೆಗಳು ಮತ್ತು ಗುತ್ತಿಗೆ ನೇಮಕಾತಿಗಳನ್ನು ಇನ್ನು ಮುಂದೆ ಮಾಡಲಾಗುವುದಿಲ್ಲ. ಈ ವಿಷಯದ ಬಗ್ಗೆ ಸಚಿವರ ನಿಲುವು ನಿಖರವಾಗಿದೆ. ದೆಹಲಿ ವಿಶ್ವವಿದ್ಯಾಲಯದಲ್ಲಿ ಮುಂದಿನ ಒಂದು ವರ್ಷದೊಳಗೆ 4,000 ಹುದ್ದೆಗಳನ್ನು ತುಂಬಲು [Robust mechanism] ಯೋಜನೆಯನ್ನು ರೂಪಿಸಲಾಗಿದೆ.
6. API – PBAS ನ ಪೂರ್ವನಿಯೋಜಿತ ಮಾದರಿಯನ್ನು ರದ್ದುಪಡಿಸಿರುವ ಖಚಿತ ಮಾಹಿತಿ ದೊರೆತಿದೆ. 7ನೇ ವೇತನ ಆಯೋಗದಲ್ಲಿ API – PBAS ಮಾದರಿ ರದ್ದಾಗಿದೆ. ಆದರೆ ಅದು ಭವಿಷ್ಯತ್ತಿಗೆ ಮಾತ್ರ ಚಾಲ್ತಿಗೆ ಬರುತ್ತದೆ. ಕಳೆದ ಹಲವಾರು ವರ್ಷಗಳಿಂದ ಒಂದೂ ಬಡ್ತಿ ಇಲ್ಲದೆ ಕೆಲಸ ಮಾಡುತ್ತಿರುವ ಸಾವಿರಾರು ಅಧ್ಯಾಪಕರು ಇರುವುದನ್ನು ಕೇಂದ್ರದ ಗಮನಕ್ಕೆ ನಿಯೋಗವು ತಂದಿದೆ. ಈ ಸಂಗತಿ ಸಚಿವಾಲಯದ ಗಮನಕ್ಕೆ ಬಂದಿರುವುದರಿಂದ ಬದಲಾವಣೆಯನ್ನು ನಿರೀಕ್ಷಿಸಬಹುದು.
7. ಕಾಲೇಜಿನ ಪ್ರಾಂಶುಪಾಲರು ಸಹ ಶೈಕ್ಷಿಕ ಮಹಾಸಂಘದ ಒಂದು ಭಾಗವಾಗಿದ್ದಾರೆ. ಪ್ರಾಂಶುಪಾಲರುಗಳ ಹುದ್ದೆ ಹಕ್ಕಿಗನುಗುಣವಾಗಿ (Lien) ಇಲ್ಲದಿರುವುದರಿಂದ 5 /10 ವರ್ಷಗಳ ನಂತರ ಅವರುಗಳು ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗೆ ಅದೇ ಕಾಲೇಜಿನಲ್ಲಿ ಕೆಲಸ ಮಾಡಬೇಕಾಗುತ್ತದೆ.

   ನಮ್ಮ ಆಗ್ರಹಕ್ಕೆ ಮಣಿದು ಇನ್ನು ಮುಂದೆ ಪ್ರಾಂಶುಪಾಲರನ್ನು ಲೀನ್ ಮೂಲಕವೇ ನೇಮಕಾತಿ ಮಾಡಲು ಕೇಂದ್ರವು ಒಪ್ಪಿದೆ.

   ಇದರಿಂದಾಗಿ ಪ್ರಾಂಶುಪಾಲರಾಗಿ ಸಲ್ಲಿಸಿದ ಸೇವೆಯ ಎಲ್ಲಾ ಸೌಲಭ್ಯಗಳನ್ನೂ ಅವರ ಅವಧಿ ಮುಗಿದ ನಂತರವೂ ಪಡೆಯಬಹುದಾಗಿದೆ.
8. ಖಾಯಂ ಸೇವೆಯಲ್ಲಿರುವ ಅಧ್ಯಾಪಕರು ಪಿಎಚ್‌ಡಿ., ಪದವಿಗಾಗಿ ಮಾಡುವ ಕೋರ್ಸ್ ವರ್ಕ್ ಸಹ ಅಧ್ಯಯನದ ಅವಧಿ ಎಂದು ಪರಿಗಣಿಲಾಗುವುದು.
9. ಅನುದಾನಿತ ಕಾಲೇಜು ಮತ್ತು ಶಾಲೆಗಳಲ್ಲಿ ಅಧ್ಯಾಪಕರುಗಳಿಗೆ ಆಗುತ್ತಿರುವ ಸಂಬಳದ ಅನ್ಯಾಯವನ್ನು ಸರಿದೂಗಿಸಲು "ನೇರ ಬ್ಯಾಂಕಿಗೆ ಜಮಾ ಮಾಡುವ ಸೌಲಭ್ಯ"ಕ್ಕೆ (Direct Debit Transaction Facility) ಕೇಂದ್ರ ಸರ್ಕಾರ ಒಪ್ಪಿ ಆಧ್ಯಾಪಕರ ಸಂಬಳ ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲು ಸಮ್ಮತಿಸಿದೆ.
10. (Ad-hac) ತಾತ್ಕಾಲಿಕ ಮತ್ತು ಗುತ್ತಿಗೆ ಅಧ್ಯಾಪಕರ ಪೂರ್ವಸೇವೆಯನ್ನು ಪರಿಗಣಿಸಬೇಕೆಂದು ಎಬಿಆರ್‌ಎಸ್‌ಎಂ ಕೇಂದ್ರ ಸರ್ಕಾರವನ್ನು ಅಗ್ರಹಪೂರ್ವಕವಾಗಿ ಒತ್ತಾಯಿಸಿದೆ. ಬಹಳ ವರ್ಷಗಳಿಂದ ಕೆಲಸ ಮಾಡುತ್ತಿರುವ ತಾತ್ಕಾಲಿಕ ಅಧ್ಯಾಪಕರುಗಳಿಗೆ ತುಂಬ ಆರ್ಥಿಕ ನಷ್ಟವಾಗುತ್ತಿದೆ. ದೆಹಲಿ

ಪುಟ 9 ಕ್ಕೆ ➢

# ಸೋದರತೆಯ ಬಾಂಧವ್ಯ ಬೆಸೆಯುವ ರಕ್ಷಾಬಂಧನ



**ವಿ. ರಾಜ**
**ಶಿಕ್ಷಣ ಪ್ರಕೋಷ್ಠ ಪ್ರಮುಖ್**
**ಕರ್ನಾಟಕ ರಾಜ್ಯ**
**ಮಾಧ್ಯಮಿಕ ಶಿಕ್ಷಕ ಸಂಘ**

ಭಾರತದಲ್ಲಿ ಶ್ರಾವಣ ಮಾಸದ ಹುಣ್ಣಿಮೆಯಂದು ರಕ್ಷಾಬಂಧನ ಹಬ್ಬ ಆಚರಣೆಯಲ್ಲಿದೆ. ಇದನ್ನು ರಾಖಿಹಬ್ಬ, ನೂಲು ಹುಣ್ಣಿಮೆ ಎಂದೂ ಕರೆಯುತ್ತಾರೆ. ಇದು ಅಣ್ಣ ತಂಗಿಯರ ಬಾಂಧವ್ಯವನ್ನು ಬೆಸೆಯುವ ಹಬ್ಬವಾಗಿದೆ. ಪ್ರತಿಯೊಬ್ಬ ಸೋದರಿಯೂ ಸಮಾಜದ ದುಷ್ಟ ಶಕ್ತಿಗಳಿಂದ ರಕ್ಷಿಸೆಂದು ಸೋದರನ ಮುಂಗೈಗೆ ರಾಖಿಯನ್ನು ಕಟ್ಟುತ್ತಾಳೆ. ಪ್ರತಿಯೊಬ್ಬ ಸೋದರನು ಈ ಸಮಯದಲ್ಲಿ ಸಹೋದರಿಯೆಡೆಗೆ ತನ್ನ ಭ್ರಾತೃತ್ವ ಪ್ರೇಮವನ್ನು ಉಜ್ವಲಗೊಳಿಸಬೇಕೆಂಬುದು ರಕ್ಷಾಬಂಧನದ ಸಂದೇಶವಾಗಿದೆ.



ರಕ್ಷಾಬಂಧನ ದಿನದಂದು ಸೋದರಿಯರು ತಮ್ಮ ಸೋದರನ ಹಣೆಗೆ ತಿಲಕವನ್ನಿಟ್ಟು, ಆರತಿಬೆಳಗಿ, ಸಿಹಿತಿನ್ನಿಸಿ ಅವನ ಮುಂಗೈಗೆ ರಾಖಿಯನ್ನು ಕಟ್ಟಿ, ಆಶೀರ್ವಾದವನ್ನು ಬೇಡುತ್ತಾಳೆ. ಅವನ ಯಶಸ್ಸು, ಆರೋಗ್ಯ, ಶ್ರೇಯೋಭಿವೃದ್ಧಿಗಾಗಿ ಹಾಗೂ ನೆಮ್ಮದಿ ಕರುಣಿಸೆಂದು ದೇವರಲ್ಲಿ ಪ್ರಾರ್ಥಿಸುತ್ತಾಳೆ.

ಭಾರತೀಯರ ಪವಿತ್ರ ಗ್ರಂಥಗಳಲ್ಲಿ ಒಂದೆನಿಸಿರುವ ಮಹಾಭಾರತದಲ್ಲಿ ಈ ರಕ್ಷಾಬಂಧನದ ಉಲ್ಲೇಖವಿದೆ. ಶ್ರೀ ಕೃಷ್ಣ ಮತ್ತು ದ್ರೌಪದಿಯರ ಸೋದರತೆಯ ಸಂಕೇತ ಈ ರಕ್ಷಾಬಂಧನ ಎಂದು ಹೇಳಲಾಗುತ್ತದೆ.

ಶಿಶುಪಾಲನ ನೂರು ತಪ್ಪುಗಳನ್ನು ಶ್ರೀ ಕೃಷ್ಣನು ಕ್ಷಮಿಸುತ್ತಾನೆ. ಆ ತಪ್ಪುಗಳ ಸರಪಳಿ ಮುಂದುವರೆದಾಗ ಅವನನ್ನು ಶಿಕ್ಷಿಸಲು ಶ್ರೀ ಕೃಷ್ಣನು ತನ್ನ ಸುದರ್ಶನ ಚಕ್ರವನ್ನು ಕಳುಹಿಸುತ್ತಾನೆ. ಶ್ರೀ ಚಕ್ರ ಕೈಯಿಂದ ಹೋಗುವಾಗ ಶ್ರೀ ಕೃಷ್ಣನ ಬೆರಳು ಗಾಯವಾಗಿ ರಕ್ತ ಸುರಿಯುತ್ತದೆ. ಇದನ್ನು ಕಂಡ ದ್ರೌಪದಿಯು ತಾನುಟ್ಟಿದ್ದ ಸೀರೆಯ ಸೆರಗಿನಿಂದ ಸ್ವಲ್ಪ ಬಟ್ಟೆಯನ್ನು ಹರಿದು ಶ್ರೀ ಕೃಷ್ಣನ ಬೆರಳಿಗೆ ಕಟ್ಟುತ್ತಾಳೆ. ಇದನ್ನು ಕಂಡ ಶ್ರೀ ಕೃಷ್ಣನು ದ್ರೌಪದಿಗೆ ಏನುಬೇಕೋ ಕೇಳಿಕೊಳ್ಳಲು ಹೇಳುತ್ತಾನೆ. ಈ ವೇಳೆ ದ್ರೌಪದಿಯು ತನ್ನ ಜೀವನ ಇರುವವರೆಗೆ ಒಳ್ಳೆಯ ಸೋದರಿಯಾಗಿರುತ್ತೇನೆ ಎಂದು ಹೇಳುತ್ತಾಳೆ. ದ್ರೌಪದಿಯ ಈ ಮಾತನ್ನು ಕೇಳಿದ ಶ್ರೀ ಕೃಷ್ಣನು ಸದಾಕಾಲ ದ್ರೌಪದಿಯ ಸೋದರನಾಗಿ ನಿಂತು ಸಂಕಷ್ಟದ ಸಮಯದಲ್ಲಿ ಕಾಪಾಡುವುದಾಗಿ ಹೇಳುತ್ತಾನೆ.

ಅದರಂತೆ ದ್ರೌಪದಿಯ ವಸ್ತ್ರಾಪಹರಣದ ಸಂದರ್ಭದಲ್ಲಿ ಶ್ರೀ ಕೃಷ್ಣನು ಅಕ್ಷಯವಾದ ವಸ್ತ್ರವನ್ನು ದಯಪಾಲಿಸಿ ಆಕೆಯ ಮಾನ-ಪ್ರಾಣವನ್ನು ರಕ್ಷಿಸುತ್ತಾನೆ. ಅಂದಿನಿಂದಲೂ ರಕ್ಷಾಬಂಧನ ಭಾರತದಲ್ಲಿ ವಿಶೇಷವಾಗಿ ಆಚರಣೆಗೊಳ್ಳುತ್ತಿದೆ.

ಇತಿಹಾಸದಲ್ಲೂ ರಕ್ಷಾಬಂಧನಕ್ಕೆ ಸಂಬಂಧಿಸಿದ ಹಲವಾರು ಘಟನೆಗಳನ್ನು ಸ್ಮರಿಸಬಹುದು. ರಜಪೂತರು ಯುದ್ಧಕ್ಕೆ ಹೊರಡುವಾಗ ಗಂಡುಮಕ್ಕಳ ಹಣೆಗೆ ತಿಲಕವನ್ನಿಟ್ಟು ರಕ್ಷಣೆಯ ಸಂಕೇತವಾಗಿ ಕೈಗೆ ರೇಷ್ಮೆಯ ದಾರವನ್ನು ಕಟ್ಟಿ, ಜಯಸಾಧಿಸೆಂದು ಹಾರೈಸುತ್ತಿದ್ದರು. ಭಾರತೀಯ ರಾಣಿಯರು ಇತರ ರಾಜ್ಯದ ರಾಜರಿಗೆ ರಾಖಿಯನ್ನು ಕಟ್ಟಿ ಸಹೋದರತೆಯ ಸಂಬಂಧ ಬೆಳೆಸುತ್ತಿದ್ದರು. ಇದರಂತೆ ಆ ರಾಜರು ಸಹೋದರಿಯರ ರಕ್ಷಣೆಗೆ ನಿಲ್ಲುತ್ತಿದ್ದರು.

ಆಕ್ರಮಣಕಾರಿ ಅಲೆಗ್ಸಾಂಡರನ ಪತ್ನಿ ತನ್ನ ಪತಿಯ ರಕ್ಷಣೆಕೋರಿ ರಾಜ ಪೌರವನಿಗೆ ರಾಖಿ ಕಳುಹಿಸುತ್ತಾಳೆ. ಆ ಕ್ಷಣದಿಂದಲೇ ಅಲೆಗ್ಸಾಂಡರನ ಪತ್ನಿಯನ್ನು ಸೋದರಿ ಎಂದು ಸ್ವೀಕರಿಸಿದ. ಪೌರವ ಯುದ್ಧದಲ್ಲಿ ಅಲೆಗ್ಸಾಂಡರನನ್ನು ಸಂಹರಿಸುವ ಸಂದರ್ಭದಲ್ಲಿ ಎತ್ತಿದ ಖಡ್ಗವನ್ನು ಹಾಗೆಯೇ ಇಳಿಸುತ್ತಾನೆ. ಎತ್ತಿದ ಕೈಯಲ್ಲಿ ರಾಖಿಯನ್ನು ಕಂಡ ತಕ್ಷಣ ತನ್ನ ತಂಗಿಯ ನೆನಪಾಗುತ್ತದೆ.

ಭಾರತದಲ್ಲಿ ಕೇವಲ ಅವರ ಅಣ್ಣ-ತಮ್ಮಂದಿರಿಗೆ ಮಾತ್ರ ರಾಖಿಕಟ್ಟದೆ -ಪರಪುರುಷರಿಗೂ ರಾಖಿ ಕಟ್ಟಿ ಸೋದರತೆಯ ಸಂಬಂಧ ಬೆಸೆಯುವ ಪದ್ಧತಿ ಇದೆ.

ರಾಜಸ್ಥಾನದ ಚಿತ್ತೋಡಗಢದಲ್ಲಿ ಜ್ವಾಲಾ ಎಂಬ ಸುಂದರ ತರುಣಿ ಇದ್ದಳು. ಆಕೆ ರಾಖಿ ಹಬ್ಬದ ದಿನ ರಾಖಿ ಮತ್ತು ಸಿಹಿ ಮಿಠಾಯಿ ತೆಗೆದುಕೊಂಡು ಮನೆಯ ಹೊರಗೆ ಬಂದಳು. ಮನೆಯ ಹೊರಗೆ ದಪ್ಪಮೀಸೆ, ಕೆಂಪುಕಣ್ಣು, ದೊಡ್ಡದಾದ ದೇಹ ಹೊಂದಿದ್ದ ದರೋಡೆಕೋರ ಲಾಖಾಸಿಂಗ್ ನಿಂತಿದ್ದ. ಅವನನ್ನು ಕಂಡು ಭಯವಾದರೂ ವಿಚಲಿತಳಾಗದೆ, "ಅಣ್ಣಾ ನಿನ್ನ ತಂಗಿ ರಾಖಿ ಕಟ್ಟುತ್ತಿದ್ದೇನೆ, ನನ್ನ ರಕ್ಷಣೆ ನಿನ್ನದು" ಎಂದು ಹೇಳಿ ರಕ್ಷೆ ಕಟ್ಟಿ ಆತನ ಪಾದದಲ್ಲಿ ತಲೆ ಇಟ್ಟು ನಮಸ್ಕಾರ ಮಾಡಿದಳು. ಅವಳಿಗೆ ತಲೆ ಎತ್ತಲು ಭಯ. ಕೆಲವು ಕ್ಷಣದ ಅನಂತರ ಅವಳ ಕೈ ಮೇಲೆ ಬಿಸಿನೀರಿನ ಹನಿ ಬಿದ್ದಿತು. ಜ್ವಾಲಾ ತಲೆ ಎತ್ತಿ ನೋಡಿದಳು. ಲಾಖಾ ಸಿಂಗನ ಕಣ್ಣಿನಲ್ಲಿ ನೀರು ತುಂಬಿತ್ತು. ಅನಂತರ ಧೈರ್ಯದಿಂದ 'ಅಣ್ಣ ನೀನು ದರೋಡೆತನ ಬಿಡು' ಎಂದಳು. ಅಂದಿನಿಂದ ಅವನು ದರೋಡೆ ಮಾಡುವುದನ್ನು ಬಿಟ್ಟು ದೇಶಕ್ಕಾಗಿ ಒಳ್ಳೆಯ ಕೆಲಸ ಮಾಡಿದ. ರಕ್ಷಾಬಂಧನವು ವಿಕಸಿತಗೊಂಡು ಇಂದು ಸಾಮಾಜಿಕ ಸ್ವರೂಪ ಪಡೆಯುತ್ತಿದೆ.

ಈ ರಕ್ಷಾಬಂಧನ ನಾಡಿನ ಸಾಂಸ್ಕೃತಿಕತೆಯ ಪ್ರತೀಕ. ●


**ಗುರುವಿಲ್ಲದಿದ್ದರೆ ಬ್ರಹ್ಮ ರುದ್ರರಿಗೂ ಅಶಕ್ಯ.**

ಭೂರಮೆ

# ಸ್ತ್ರೀ ಶಕ್ತಿ

■ ಲತೇಶ್ವರಿ
ಸಹಾಯಕ ಪ್ರಾಧ್ಯಾಪಕರು
ಗೋಪಾಲಸ್ವಾಮಿ ಶಿಕ್ಷಣ ಸಂಸ್ಥೆ, ಮೈಸೂರು

**ಸ್ತ್ರೀಶಕ್ತಿ –ಇದರ ವ್ಯಾಪ್ತಿ ಅಗಾಧ, ಅಪಾರವಾದ ಸಹನೆ, ಆತ್ಮವಿಶ್ವಾಸ, ದೃಢಮನಸ್ಸು, ಗುರಿ ಸಾಧಿಸುವ ಛಲ ಇವಳ ಶಕ್ತಿಯ ಅಡಿಗಲ್ಲುಗಳು. ಇವೆಲ್ಲದರ ಆಧಾರದ ಮೇಲೆ ಈಕೆ ತನ್ನ ಬದುಕನ್ನು ಕಟ್ಟಿಕೊಳ್ಳುತ್ತಾಳೆ. ಅಡೆ–ತಡೆಗಳು ಎದುರಾದರೂ ಧೈರ್ಯದಿಂದ ಎದುರಿಸಿ ಯಶಸ್ಸಿನೊಂದಿಗೆ ಸಾರ್ಥಕ್ಯ ಪಡೆಯುತ್ತಾಳೆ. ವಿದ್ಯಾವಂತೆಯಾಗಿರಲಿ, ಅನಕ್ಷರಸ್ಥೆಯಾಗಿರಲಿ, ಇಂತಹ ಗಟ್ಟಿ ವ್ಯಕ್ತಿತ್ವವಿದ್ದಲ್ಲಿ, ಸೋಲೆಂಬ ಸೊಲ್ಲಿಗೆ ಇಲ್ಲಿ ಎಡೆಯಿಲ್ಲ. ಇವರೆಲ್ಲ ನಮ್ಮೆಲ್ಲರ ನಡುವೆಯೇ ಸರ್ವೇ ಸಾಮಾನ್ಯರಂತೆ ಬೆರೆತುಹೋಗಿರಬಹುದು. ಅಥವಾ ಸಮಾಜದಲ್ಲಿ ಪ್ರಮುಖ ವ್ಯಕ್ತಿಗಳಾಗಿ ಎಲ್ಲರ ಗಮನಕ್ಕೆ ಬಂದಿರುವ ಸ್ಥಾನದಲ್ಲಿಯೂ ಇರಬಹುದು. ಗುರುತಿಸುವ ಕಣ್ಣಿಗೆ ಮಾತ್ರ ಸಾಮಾನ್ಯರ ಈ ಅಸಾಮಾನ್ಯ ವ್ಯಕ್ತಿತ್ವದ ಅರಿವಾಗುತ್ತದೆ. ಅಂತಹ ಕೆಲವು ಉದಾಹರಣೆಗಳನ್ನು ಇಲ್ಲಿ ನೋಡೋಣ. ಜೀವಮಾನವಿಡೀ ಎಲೆಮರೆಯಕಾಯಂತೆ ರೂಪು ಇಲ್ಲದ ದನಿಯಂತೆ ಸದ್ದಿಲ್ಲದೆ, ಆದರೆ ಹಿಡಿತಪ್ಪದಂತೆ ಬದುಕೆಂಬ ಬಂಡಿಯನ್ನು ಸಮರ್ಥವಾಗಿ ಎಳೆದೊಯ್ಯುತ್ತಿರುವ ಸಾಧಕಿಯರಿಗೊಂದು ನಮನವೇ ಈ ಲೇಖನ.**



## ನಮ್ಮ ಪುಟ್ಟಲಕ್ಷ್ಮಿ

ಕೆ. ಆರ್. ನಗರ ತಾಲ್ಲೂಕಿನ ಪುಟ್ಟಗ್ರಾಮ ನನ್ನ ತವರೂರು. ಸಂಪೂರ್ಣ ನೀರಾವರಿ ಸೌಲಭ್ಯ ತಾಲ್ಲೂಕಿನ ಎಲ್ಲ ಹಳ್ಳಿಗಳಿಗೆ ಸಿಕ್ಕಿಲ್ಲ. ಹಾಗಾಗಿ ಬಹುತೇಕ ರೈತರು ಮಳೆಯನ್ನೇ ಆಶ್ರಯಿಸಿದವರು. ನಮ್ಮ ಎದುರು ಮನೆಯಲ್ಲಿ ಎರಡು ಮಕ್ಕಳಿರುವ ಒಂದು ಕುಟುಂಬವಿತ್ತು. ಅವರಲ್ಲಿ ಮಗಳ ಹೆಸರು ಪುಟ್ಟಲಕ್ಷ್ಮಿ, ಪುಟ್ಟ ಆಕಾರ ಹೆಸರಿಗೆ ತಕ್ಕಂತೆ. ಮದುವೆಯ ವಯಸ್ಸಿಗೆ ಬಂದಾಗ ಆಕೆಯ ಸಂಬಂಧಿಕರ ಮಗನೊಟ್ಟಿಗೆ ವಿವಾಹವಾಯಿತು. ಅಣ್ಣ ಯಾವುದೋ ಕಾರಣಕ್ಕೆ ಮನೆಯವರೊಂದಿಗೆ ವೈಮನಸ್ಯ ಹೊಂದಿ ಅಪ್ಪನ ಆಸ್ತಿಯಲ್ಲಿ ಪಾಲು ತೆಗೆದುಕೊಂಡು ಬೇರೆಯೇ ಊರಿನಲ್ಲಿ ಸಂಸಾರ ಹೂಡಿದ. ಅದರ ಪರಿಣಾಮವೋ ಏನೋ ಪುಟ್ಟಲಕ್ಷ್ಮಿಯ ಗಂಡ ಮದುವೆಯಾದ ಮೂರೇ ತಿಂಗಳಲ್ಲಿ ಜಗಳ ಮಾಡಿಕೊಂಡು ಆಕೆಯನ್ನು ಕರೆತಂದು ತವರಿನಲ್ಲಿ ಬಿಟ್ಟು ಹೋದ. ತವರಿನಲ್ಲಿ ಶಾಶ್ವತವಾಗಿ ಉಳಿದ ಪುಟ್ಟಲಕ್ಷ್ಮಿಯ ಹೊಟ್ಟೆಯಲ್ಲಿ ಕರುಳ ಕುಡಿಯೂ ಇತ್ತು. ಆಕೆ ಅನಕ್ಷರಸ್ಥೆ, ಆದರೇನು? ಬದುಕನ್ನು ಎದುರಿಸುವ ಛಲ ಆಕೆಯಲ್ಲಿತ್ತು. ತನ್ನ ಕಂದನನ್ನು ಒಳ್ಳೆಯ ರೀತಿಯಲ್ಲಿ ಬೆಳೆಸುವ, ವಿದ್ಯಾವಂತ ಪ್ರಜೆಯನ್ನಾಗಿ ರೂಪಿಸುವ ನಿರ್ಧಾರ ಆಕೆಯದಾಗಿತ್ತು. ತವರಿಗೆ ಭಾರವಾಗದೆ, ಮನೆಗೆಲಸ ಮಾಡುತ್ತ, ಅವರಿವರ ಹೊಲಗದ್ದೆಗಳಲ್ಲಿ ದುಡಿಯುತ್ತ, ಅವರಿವರ ಮಾತುಗಳು ಚುಚ್ಚುವಂತಿದ್ದರೂ ಮನಸ್ಸು ಗಟ್ಟಿಮಾಡಿ ಮಗನನ್ನು ಶಾಲೆಗೆ ಕಳುಹಿಸಿದ್ದಳು.

ಕಾಲ ಉರುಳಿತು. ಇತ್ತೀಚೆಗೆ ನಾನು ಊರಿಗೆ ಹೋದಾಗ ಕೇಳಿದ ವಿಷಯ ಆಶ್ಚರ್ಯದ ಜೊತೆಗೆ ಪುಟ್ಟಲಕ್ಷ್ಮಿಯ ಬಗ್ಗೆ ಹೆಮ್ಮೆಯನ್ನೂ ಮೂಡಿಸಿತ್ತು. ಆಕೆಯ ಮಗ ಸ್ನಾತಕೋತ್ತರ ಪದವಿಯನ್ನು ಪೂರ್ಣಗೊಳಿಸಿ ಉಪನ್ಯಾಸಕರ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಉದ್ಯೋಗವನ್ನೂ ಹಿಡಿದಿದ್ದ. ಸಾಧನೆ ಎಂದರೆ ಇದೇ ತಾನೆ? ತನ್ನ ಸರ್ವಸ್ವ, ತನ್ನ ಕನಸು, ತನ್ನ ಕುಟುಂಬ ಎಲ್ಲವೂ ಆಗಿದ್ದ ಮಗನನ್ನು ದಡಮುಟ್ಟಿಸಿದ ಆ ತಾಯಿ ಸ್ತ್ರೀ ಶಕ್ತಿಯ ನಿದರ್ಶನ ತಾನೆ?

## ನಮ್ ರಾಜಮ್ಮ

ನಮ್ಮ ಕಾಲೇಜಿನಲ್ಲಿ ಸೇವೆಗೆ ಸೇರಿದಾಗಿನಿಂದ ನನ್ನ ಮನಸ್ಸಿನಲ್ಲಿ ಆಳವಾಗಿ ಕುಳಿತಿರುವ ಇನ್ನೊಂದು ವ್ಯಕ್ತಿತ್ವ, ಆಯ ಕೆಲಸ ಮಾಡುತ್ತಿರುವ ರಾಜಮ್ಮ. ಇಬ್ಬರು ಮಕ್ಕಳು. ಒಂದು ಗಂಡು, ಒಂದು ಹೆಣ್ಣು. ನಡುವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡ ರಾಜಮ್ಮ ಅಲ್ಪ ಸಂಬಳದಲ್ಲಿಯೇ ಪುಟ್ಟ ಬಾಡಿಗೆ ಮನೆಯಲ್ಲಿ ವಾಸಿಸುತ್ತ, ತಾನು ಕೆಲಸ ಮಾಡುತ್ತಿರುವ ಕಾಲೇಜಿನಲ್ಲಿಯೇ ಇಬ್ಬರೂ ಮಕ್ಕಳನ್ನು ಓದಿಸುತ್ತಾ, ತಿಳಿದವರನ್ನು ಆಶ್ರಯಿಸಿ,

ಪುಟ 10 ಕ್ಕೆ ➤

# ವಚನಗಳಲ್ಲಿ ಮೌಲ್ಯಗಳು

ಚಿಕ್ಕಸ್ವಾಮಿ
ಅಧ್ಯಕ್ಷರು, ಕರ್ನಾಟಕ ಮಾಧ್ಯಮಿಕ ಶಿಕ್ಷಕ ಸಂಘ
ಮಂಡ್ಯ ಜಿಲ್ಲೆ, ಮಂಡ್ಯ

ವಚನ ಚಳುವಳಿ ಜೀವ ಪಡೆದು 9 ಶತಮಾನಗಳಿಗೂ ಹೆಚ್ಚು ಸಮಯ ಆಗಿದ್ದರೂ ಅವು ಪ್ರಸಕ್ತ ಸನ್ನಿವೇಶಕ್ಕೆ ಸಮಕಾಲೀನ ಸವಾಲುಗಳಿಗೆ ಸಿದ್ಧೌಷದದಂತೆ, ಅತ್ಯುತ್ತಮ ಚಿಕಿತ್ಸೆಯಂತೆ ಪ್ರಸ್ತುತವಾಗಿವೆ. ಸಾರ್ವಕಾಲಿಕ ಮೌಲ್ಯಗಳಾಗಿ ಸಮಕಾಲಿನ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯಗಳಾಗಿವೆ.

ಜಾತಿ ಭೇದ ಪದ್ದತಿಗಳು, ಭಾರತವನ್ನು ವಿನಾಶದತ್ತ ಉಪಕ್ರಮಿಸುತ್ತಿದ್ದ ಕ್ಲಿಷ್ಟ ಸನ್ನಿವೇಶದಲ್ಲಿ ಭಾರತೀಯ ಸಮಾಜಕ್ಕೆ ಹೊಸ ಸಮರ್ಥ, ದಿಗ್ದರ್ಶಕ, ಬಲಾಢ್ಯ, ಚಿಂತಕ, ದಾರ್ಶನಿಕ ಮಾರ್ಗದರ್ಶಕದ ಅನಿವಾರ್ಯತೆಯನ್ನು ಸೃಷ್ಟಿಸಿದ್ದ ಸಂಕಷ್ಟ ಸಮಯದಲ್ಲಿ ಉದಯಿಸಿದ ಬೆಳಕೇ ವಚನ ಸಾಹಿತ್ಯ.

ವಿಜ್ಞಾನದ ವಿಧ್ವಂಸಕ ಮುಖವನ್ನು ನೋಡುತ್ತಿರುವ ಪರಿಸ್ಥಿತಿಯಲ್ಲಿ ಆಯ್ದಕ್ಕಿ ಮಾರಯ್ಯನ ಪತ್ನಿ ಲಕ್ಕಮ್ಮ.

**ನಮಗೆ ಎಂದಿನದೇ ಸಾಕು**
**ಮತ್ತೆ ಕೊಂಡು ಹೋಗಿ ಅಲ್ಲಿಯೇ ಸುರಿ**
**ಮಾರಯ್ಯ ಪ್ರಿಯ ಅಮರೇಶ್ವರನ ಲಿಂಗ ಕೊಟ್ಟು**
**ಕಾಯಕವೇ ಸಾಕು ಮಾರಯ್ಯ**

ಹೀಗೆ ಹೇಳುವ ಮೂಲಕ ದುರಾಸೆಯನ್ನು ಬಿಡಲು ತಿಳಿಸಿ ಆತನು ತಂದಿದ್ದ ಅಧಿಕ ಅಕ್ಕಿಯನ್ನು ಅಲ್ಲೇ ಸುರಿದು ಬರಲು ತಿಳಿಸುತ್ತಾಳೆ. ಹೆಚ್ಚಿಗೆ ಏಕೆ ತಂದೆ ಎಂದು ಪ್ರಶ್ನಿಸುತ್ತಾಳೆ. ಇಂತಹ ದಿಟ್ಟತನ, ಸಾಧ್ವಿ ನಡವಳಿಕೆ ಈಗ ಎಲ್ಲರಲ್ಲಿಯೂ ಬೆಳೆದಿದ್ದೇ ಆದರೆ ಆರ್ಥಿಕ ಸಮಾನತೆ, ಸಾಮಾಜಿಕ ಸಮಾನತೆ ಮೂಡಿರಲು ಸಾಧ್ಯವಾಗುತ್ತದೆ.

ಪ್ರತಿಯೊಬ್ಬನು ತನ್ನ ಕಾಯಕಕ್ಕೆ ನಿಷ್ಠರಾಗಬೇಕೆಂದು ಸುಮ್ಮನೆ ಕುಳಿತಿದ್ದ ತನ್ನ ಪತಿಗೆ ಲಕ್ಕಮ್ಮನು

**ಕಾಯಕ ನಿಂದಿತ್ತು ಹೋಗಯ್ಯ ಎನ್ನಾಳ್ದನೆ**
**ಭಾವಶುದ್ಧವಾಗಿ ಮಹಾಶರಣರ ತಿಪ್ಪೆಯ ತಪ್ಪಲಕ್ಕಿಯ ತಂದು**
**ನಿಶ್ಚೈಸಿ ಮಾಡಬೇಕು ಮಾರಯ್ಯ ಪ್ರಿಯ ಅಮರೇಶ್ವರ ಲಿಂಗಕ್ಕೆ**
**ಬೇಗ ಹೋಗು ಮಾರಯ್ಯ**

ಎಂದು ಮಾರಯ್ಯನನ್ನು ಎಚ್ಚರಿಸಿ, ಕಾಯಕಕ್ಕೆ ತೆರಳುವಂತೆ ಮಾಡುತ್ತಾಳೆ. ದುಡಿಮೆಗೆ ಗಂಟೆಗಿಷ್ಟು, ಹೊತ್ತಿಗಿಷ್ಟು ಸಂಭಾವನೆ ಪಡೆದು, ಏನೂ ದುಡಿಯದೆ ಸೋಮಾರಿಗಳಾಗಿ ಪ್ರತಿಫಲ ನಿರೀಕ್ಷಿಸುವ ಜನರಿಗೆ ಈ ನಡೆ ದಾರಿದೀಪ.

ವಚನಗಳು ಕಳೆಕಿತ್ತು, ಕೃಷಿ ಮಾಡಿ ಜೀವನೋಪಾಯಕ್ಕಾಗಿ ಬೆಳೆದ ಆಹಾರ ಧಾನ್ಯಗಳಂತೆ ಬದುಕಿಗೆ ಉತ್ತಮ ಮಾರ್ಗವನ್ನು ತೋರಿವೆ. ವಚನ ಸಾಹಿತ್ಯ ಸಂಪ್ರದಾಯಕ್ಕಿಂತ ಅನುಭವಕ್ಕೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡಿ ಕರ್ನಾಟಕದಲ್ಲಿ ದೊಡ್ಡ ಕ್ರಾಂತಿಯನ್ನೆ ಮಾಡಿ ವಿಶ್ವಧರ್ಮದ ಸಾಲಿನಲ್ಲಿ ನಿಂತಿದೆ.

**ದಾಸಿ ಪುತ್ರನಾಗಲಿ, ವೇಶ್ಯಾ ಪುತ್ರನಾಗಲಿ,**
**ಶಿವದೀಕ್ಷೆಯಾದ ಬಳಿಕ ಸಾಕ್ಷತ್ ಶಿವನೆಂದು ವಂದಿಸಿ,**
**ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ.**
**ಹೀಗಲ್ಲದೆ ಉದಾಸೀನವ ಮಾಡಿ ಬಿಡುವವರಿಗೆ**
**ಪಂಚಮಹಾಪಾತಕ ನರಕ ಕಾಣಾ ಕೂಡಲ ಚನ್ನ ಸಂಗಮದೇವ.**

ಎಂದು ಚನ್ನಬಸವೇಶ್ವರರು ಎಲ್ಲರಿಗೂ ಎಚ್ಚರಿಕೆ ನೀಡಿ ಸಮಾಜದಲ್ಲಿ ಎಲ್ಲರೂ ಸಮಾನರು ಎಂಬುದನ್ನು ಧೃಡಪಡಿಸಲು ಸಹಪಂಕ್ತಿ ಭೋಜನ, ಕೊಳ್ಕೊಡೆ ಬಹಳ ಮುಖ್ಯವಾಗಿ ವೃತ್ತಿ, ಜಾತಿ ಯಾವುದಾದರೂ ಅವುಗಳನ್ನು ಪರಿಗಣಿಸದೆ ಅವರುಗಳ ಮನೆಯಲ್ಲಿ ಊಟಮಾಡಬೇಕೆಂದು ಅವರ ಸಂಬಂಧಗಳನ್ನು ಬೆಳೆಸಬೇಕೆಂದು ಸೂಚಿಸುತ್ತಾನೆ. 12ನೇಶತಮಾನದಲ್ಲೂ ಇದ್ದ ಈ ತಾರತಮ್ಯ ಇಂದಿಗೂ ಜೀವಂತವಾಗಿದ್ದು ಸಾಮಾಜಿಕ ಪಿಡುಗಾಗಿ ಕಾಣುತ್ತಿದೆ. ಅದನ್ನು ಸರಿಪಡಿಸಲು ವಚನಕಾರರು ಶ್ರಮಿಸಿದಂತೆ, ಸಮಾನತೆಯ ಸಮಾಜ ನಿರ್ಮಾಣಕ್ಕಾಗಿ ಇಂದಿನ ಅವಶ್ಯಕತೆಯೂ ಆಗಿರುವುದು ವಚನ ಸಾಹಿತ್ಯದ ಅಗತ್ಯ ಪ್ರಾಮುಖ್ಯತೆಯನ್ನು ಶ್ರುತಪಡಿಸುತ್ತದೆ.

ಸದಾಚಾರದಲ್ಲಿ ಕಾಯಕಕ್ಕೆ ಹೆಚ್ಚಿನ ಪ್ರಾಶಸ್ತ್ಯವುಂಟು, ಕಾಯಕವೆಂದರೆ ಜೀವನೋಪಾಯಕ್ಕೆ ಕೈಗೊಂಡ ವೃತ್ತಿ, ಎಲ್ಲ ವೃತ್ತಿಗಳೂ ಗೌರವಯುತವಾದುದೆಂದೂ, ಅವುಗಳಲ್ಲಿ ಯಾವುದೂ ಹೆಚ್ಚು ಕಡಿಮೆ ಇಲ್ಲವೆಂದು ವೃತ್ತಿಯಿಂದ ಜಾತಿಗಳು ಏರ್ಪಡುವುದಿಲ್ಲವೆಂದು ವಚನ ಧರ್ಮ ಹೇಳುತ್ತದೆ.

**ಕಾಸಿ ಕಮ್ಮಾರವಾದ, ಬೀಸಿಮಡಿವಾಳನಾದ**
**ಹಾಸನಿಕ್ಕಿ ಸಾಲಿಗನಾದ, ವೇದವ ನೋದಿ ಹಾರುವನಾದ**
**ಇದು ಕಾರಣ ಕೂಡಸಂಗಮದೇವ ಲಿಂಗ**
**ಸಂಗವನರಿತವನೇ ಕುಲಜನು**

ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದ ಚಿಂತನೆ ಆಲೋಚನೆ ತಾರ್ಕಿಕತೆ, ಒಳ್ಳೆಯ ಕೆಟ್ಟದ್ದನ್ನು ವಿಮರ್ಶಿಸುವ, ನಿರ್ಧರಿಸುವ ಸ್ವಾತಂತ್ರ್ಯವಿರುತ್ತದೆ. ತನ್ನ ಜೀವನದ ಶಿಲ್ಪಿ ತಾನೇ ಎಂದು ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಪ್ರತಿಭಾ ಸಂಪನ್ನತೆಯನ್ನು ತಾನೇ ಎಂದೂ ಅರಿಯಲಾರರು.

**ಎಲ್ಲ ಎಲ್ಲವನರಿದು ಫಲವೇನಯ್ಯ**
**ತನ್ನಲ್ಲಿ ಅರಿವು ಸ್ವಯಂ ಆಗಿರಲು**
**ಅನ್ಯರ ಕೇಳಲುಂಟೇ ಚನ್ನಮಲ್ಲಿಕಾರ್ಜುನ**
**ಎನ್ನುವ ಅಕ್ಕನ ಮಾತುಗಳು ಮೊದಲು ತನ್ನನ್ನು**

ಪುಟ 10 ಕ್ಕೆ ➢

ದಾರಿದೀಪ

# ಸ್ವಾತಂತ್ರ್ಯದ ರಕ್ಷಣೆ – ನಮ್ಮ ಜವಾಬ್ದಾರಿ

**ಭೀಮಸೇನ್ ವಿ. ಪುರೋಹಿತ್**
**ಡಾಟಾ ಸೈನ್‌ಟಿಸ್ಟ್**
**ಸಖಾ ಗ್ಲೋಬಲ್**
**ಬೆಂಗಳೂರು**



ಭಾರತದ ಮಣ್ಣಲ್ಲಿ, ಬ್ರಿಟಿಷರ ಯೂನಿಯನ್ ಜಾಕ್ ಧ್ವಜವು ಕೆಳಗಿಳಿದು, ಭಾರತದ ತ್ರಿವರ್ಣ ಧ್ವಜವು ಆಗಸದೆತ್ತರಕ್ಕೆ ಹಾರಾಡಿ, ಸ್ವಾತಂತ್ರ್ಯದ ನೆಮ್ಮದಿಯ ನಿಟ್ಟುಸಿರು ಬಿಟ್ಟು, ಈ ಆಗಸ್ಟ್ 15 ಕ್ಕೆ 70 ವರ್ಷವಾಯಿತು. ಒಬ್ಬ ವ್ಯಕ್ತಿಗೆ ಅಷ್ಟು ವರ್ಷ ವಾಯಿತೆಂದರೆ ಸ್ವಲ್ಪ ಚಿಂತೆ ಕಾಡುತ್ತದೆ. ವೃದ್ಧಾಪ್ಯದ ಚಿಂತೆ. ಆದರೆ ಒಂದು ಸಮಾಜಕ್ಕೆ, ರಾಷ್ಟ್ರಕ್ಕೆ ವರ್ಷಗಳು ಹೆಚ್ಚಾದಷ್ಟು ಅದರ ಉನ್ನತಿಯೇ ಭವ್ಯವಾಗಿ ಕಾಣುತ್ತದೆ. ಹಾಗೆ ಅನೇಕ ಅಡೆತಡೆಗಳನ್ನು ಮೀರಿ ಬೆಳವಣಿಗೆಗೆ ಮುಖಮಾಡಿ ನಾವೀಗ ನಿಂತಿದ್ದೇವೆ. ಈ ಹೊತ್ತಿನಲ್ಲಿ ವರ್ತಮಾನ ಮತ್ತು ಭವಿಷ್ಯತ್ತಿನ ಆಲೋಚನೆಯನ್ನು ಮಾಡಬೇಕಾದ್ದು ಅನಿವಾರ್ಯವಾಗಿದೆ.

ಭಾರತದ ಸ್ವಾತಂತ್ರ್ಯ ಸುಖಾಸುಮ್ಮನೆ ದೊರೆತಿದ್ದಲ್ಲ, ನೂರಾರು ವರ್ಷಗಳ ತೀವ್ರತರ ಹೋರಾಟ, ಬಲಿದಾನ, ತ್ಯಾಗಗಳ ಫಲವಾಗಿ ದೊರೆತಿದೆ. ಒಮ್ಮೆ ನಡೆಯುತ್ತಿರುವ ವರ್ತಮಾನಗಳನ್ನು ಗಮನಿಸಿದರೆ, ಭಾರತೀಯನಿಗೆ ಆತಂಕವಾಗುವುದು ಖಂಡಿತ. ಒಂದೆಡೆ ಗಡಿಯಲ್ಲಿ ಸೈನಿಕರ ಮರಣ, ಚೀನಾ ದೇಶದ ಉಪಟಳ, ಇದೆಲ್ಲದರ ಮಧ್ಯೆ, ನಮ್ಮಲ್ಲಿಯೇ ಬೆಳೆದು ಸ್ವೇಚ್ಛೆಯ ಹೆಸರಿನಲ್ಲಿ ಭಾರತದ ಆಂತರಿಕ ಭದ್ರತೆಗೆ ಸವಾಲಾಗಿರುವ ಕಮ್ಯುನಿಸ್ಟ್ ಪ್ರೇರಿತ ನಕ್ಸಲರು ಮತ್ತು ಅರೆಜ್ಞಾನದ ಸಾಹಿತಿಗಳು ಮತ್ತು ಚಿಂತಕರು. ಇವರನ್ನೆಲ್ಲ ನೋಡಿದಾಗ, ನಮ್ಮ ದೇಶದ ಸ್ವತಂತ್ರ ಬಹಳವೇ ಅತಿಯಾಯಿತೇನೋ ಅನ್ನಿಸುವುದು ಸಹಜ. ಅತಿಯಾದರೆ ಅಮೃತವೂ ವಿಷ ಎನ್ನುವಂತೆ, ಅಭಿವ್ಯಕ್ತಿ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯ, ಬರವಣಿಗೆಯ ಸ್ವಾತಂತ್ರ್ಯ ಇವೆಲ್ಲವುಗಳ ದುರುಪಯೋಗವೇ ಎದ್ದು ಕಾಣುತ್ತಿದೆ. ಮತ್ತು ಅದನ್ನು ಸದೆಬಡಿದು ಭಾರತೀಯತೆಯನ್ನು ಪ್ರಕಾಶಪಡಿಸುವ ಮಾರ್ಗೋಪಾಯಗಳೂ ಕೂಡ ಸಂವಿಧಾನದಲ್ಲಿ ಲೋಪವಾಗಿವೆ. ಇದೆಲ್ಲದರ ಪರಿಣಾಮವಾಗಿ, ಯಾವ ಆಂಗ್ಲರಿಂದ ಭಾರತದ ಸ್ವಾಭಿಮಾನವನ್ನು ಬಡಿದೆಬ್ಬಿಸಿದೆವೋ, ಅದು ಕ್ರಮೇಣ ಲೀನವಾದಂತೆ ಭಾಸವಾಗುತ್ತಿದೆ. ಹೀಗಾಗಿ, ರಾಷ್ಟ್ರದ ಸ್ವಾತಂತ್ರ್ಯವನ್ನು ಗಟ್ಟಿಯಾಗಿ ಉಳಿಸಿಕೊಳ್ಳುವ ಬಗ್ಗೆ ಚಿಂತನೆ ಮಾಡಲೇಬೇಕಾದ ಅವಶ್ಯಕತೆ ಇದೆ.

ಮೊದಲಿಗೆ ಸ್ವಾತಂತ್ರ್ಯಕ್ಕೂ ಸ್ವೇಚ್ಛಾಚಾರಕ್ಕೂ ಇರುವ ಮೂಲ ವ್ಯತ್ಯಾಸ ಇಂದಿನ ಯುವಕರಿಗೆ ಗೊತ್ತಾಗಬೇಕು. ಎಲ್ಲೆ ಮೀರಿ ಹೋಗುವುದೇ ಸ್ವಾತಂತ್ರ್ಯವಲ್ಲ. ಅಂತಹ ವಿಪರೀತದಿಂದ ಯಾವ ಸಮಾಜವೂ ಸ್ವಸ್ಥವಾಗಿ ಉಳಿಯಲು ಸಾಧ್ಯವಿಲ್ಲ. ಸ್ವಾತಂತ್ರ್ಯಕ್ಕೂ ತನ್ನದೇ ಆದ ಚೌಕಟ್ಟಿದೆ. ಅದು ಸಮಾಜದ ಒಳಿತಿನ ಮೇಲೆ ನಿಂತಿದೆ. ಇದು ನಮ್ಮ ಸ್ವಾತಂತ್ರ್ಯ ಎಂದು ಭಾವಿಸುವ ಯಾವುದೇ ಕೆಲಸವೂ ಸಜ್ಜನ ಸಮಾಜದ ವಿರೋಧಿಯಾಗಿದ್ದರೆ ಖಂಡಿತ ಅಂಗೀಕಾರಾರ್ಹವಲ್ಲ. ಈ ಮೂಲಭೂತ ವಿಚಾರವೇ ಎಷ್ಟೋ ಸಮಸ್ಯೆಗಳಿಗೆ ಪರಿಹಾರವಾಗಬಲ್ಲದು.

ಎರಡನೆಯದಾಗಿ, ಬಾರಿಯ ಅಂಕಗಳ ಶಿಕ್ಷಣಕ್ಕಿಂತ, ಮೌಲ್ಯಯುತ ಶಿಕ್ಷಣದ ಪ್ರಸಾರವಾಗಬೇಕು. ಹುಟ್ಟುವ ಪ್ರತಿ ಮಗುವಿಗೂ ಇರುವ ಮೊದಲ ಯೋಚನೆಯೆಂದರೆ, ಯಾವ ಕ್ಷೇತ್ರದಲ್ಲಿ ಹೆಚ್ಚು ಸಂಪಾದನೆ ಇದೆ ಎಂಬುದೇ. ಅದಕ್ಕೆ ಬೆಳೆಸುವ ತಂದೆ ತಾಯಿಗಳೂ ಕಾರಣೀಭೂತರಾಗಿದ್ದಾರೆ. ಅದನ್ನು ಪಕ್ಕಕ್ಕಿಟ್ಟು, ಮೊದಲು ಎಲ್ಲಿ ನೈತಿಕತೆಗೆ ಆದ್ಯತೆ ಇದೆ, ಹೇಗೆ ಅದನ್ನು ಪ್ರಚುರಪಡಿಸುವುದು ಎನ್ನುವುದರ ಬಗ್ಗೆ ಮಕ್ಕಳು ಚಿಂತಿಸಲು ಕಲಿತರೆ, ಭಾರತದ ಭಾಗ್ಯ ತೆರೆದಂತೆಯೇ.

ಇದೆಲ್ಲದರ ಮಧ್ಯೆ, ನಮ್ಮ ಭವ್ಯ ಪರಂಪರೆ ಮತ್ತು ಇತಿಹಾಸದ ದಿವ್ಯ ನಿರ್ಲಕ್ಷ್ಯವೂ ಇವತ್ತಿನ ದುರಂತಗಳಿಗೆ ಪೂರಕವಾಗಿದೆ. ಯಾವ ಪರಂಪರೆಯ ಅಧ್ಯಯನದಿಂದ, ವಿವೇಕಾನಂದ, ಶಿವಾಜಿಯಂತಹ ಮಹಾತ್ಮರು ಉದಯಿಸಿದರೋ, ಅಂತಹ ಇತಿಹಾಸವನ್ನೇ ಮರೆತಿರುವಾಗ ಯಾವುದರ ಅಭ್ಯುದಯ ವಾಗಲು ಸಾಧ್ಯವಿದೆ. ಮನೆ ಮನೆಯಲ್ಲೂ ಅಂತಹ ವಾತಾವರಣ ಮರುಸೃಷ್ಟಿಯಾಗಬೇಕು. ಭಾರತ ಎಂಬ ಹೆಸರು ಹೇಳಲು ಹೆಮ್ಮೆ ಪಡುವಂತಹ ಮನಸ್ಥಿತಿ ಯುವಕರಲ್ಲಿ ಬಂದಾಗಲೇ, ಈ ನಾಡಿಗಾಗಿ ಏನಾದರೂ ಮಾಡಬೇಕೆಂಬ ಹಂಬಲ ಚಿಗುರಲು ಸಾಧ್ಯ.

ಈ ನಿಟ್ಟಿನಲ್ಲಿ, ಈ ಸ್ವಾತಂತ್ರ್ಯದ ದಿನದಂದು, ನಮ್ಮ ಭವ್ಯ ಸ್ವಾತಂತ್ರ್ಯದ ರಕ್ಷಣೆಗೆ ಪಣತೊಟ್ಟು, ಕಾರ್ಯೋನ್ಮುಖರಾಗೋಣ.

**ವಂದೇ ಮಾತರಂ..**

---

**ಕನಸಿನ ಗೋಪುರ ಒಡೆಯದಿರಲಿ, ಮನಸ್ಸಿನ ಮಂದಿರ ಬೀಳದಿರಲಿ**
**ಆದರೆ ನಿಮ್ಮ ಬದುಕು ಯಾವಾಗಲೂ ಕನ್ನಡಿಗರ, ಕನ್ನಡದ ಸೇವೆಯಲ್ಲಿರಲಿ.**

– **ಚನ್ನಬಸಪ್ಪ ದಳವಾಯಿ**, ದಾವಣಗೆರೆ

**ಶಾಶ್ವತವಾದ ಆನಂದವನ್ನು ಹೊಂದುವುದು ಸದ್ಗುರುವಿನ ಅನುಗ್ರಹದಿಂದ ಮಾತ್ರ ಸಾಧ್ಯ.**

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ: ದಿನಾಂಕ 31.12.2014ರವರೆಗೆ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ನಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿಮಾಡಲು ಅನುಮತಿ ನೀಡುವ ಕುರಿತು.**

## ಪ್ರಸ್ತಾವನೆ

ಮೇಲೆ ಕ್ರಮಾಂಕ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಅನುದಾನಿತ ಖಾಸಗಿ ಪ್ರೌಢಶಾಲೆಯಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2008ರ ಪೂರ್ವದಲ್ಲಿ ಖಾಲಿಯಾದ 3661 ಬೋದಕ ಹುದ್ದೆಗಳನ್ನು ಭರ್ತಿ ಮಾಡಲು ಒಪ್ಪಿಗೆ ನೀಡಲಾಗಿತ್ತು. ಅದರಲ್ಲಿ 2327 ಹುದ್ದೆಗಳನ್ನು ಮಾತ್ರ ಭರ್ತಿ ಮಾಡಿ, ವಿವಿಧ ಶಾಲೆಗಳು ನಿಗಧಿತ ಮಾನದಂಡಗಳನ್ನು ಪೂರೈಸದಿರುವುದರಿಂದ ಇನ್ನೂ ಭರ್ತಿ ಮಾಡದೇ 1334 ಹುದ್ದೆಗಳು ಬಾಕಿ ಉಳಿದಿದ್ದವು. ಈ ಬಾಕಿ ಹುದ್ದೆಗಳನ್ನು ದಿನಾಂಕ 1.1.2009ರಿಂದ 31.12.2012ರವರೆಗೆ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ತೆರವಾಗಿದ್ದ 2516 ಬೋಧಕ ಹುದ್ದೆಗಳಿಗೆ ಎದುರಾಗಿ ಭರ್ತಿ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಕ್ರಮಾಂಕ (2)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು (ಪ್ರೌಢ ಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ 31.12.2012ರವರೆಗೆ ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1476 ಖಾಲಿ ಹುದ್ದೆಗಳನ್ನು ದಿನಾಂಕ 1.1.2013ರಿಂದ 31.12.2014ರವರೆಗೆ ಹಾಗೂ ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1275 ಖಾಲಿ ಹುದ್ದೆಗಳನ್ನು ಹಾಗೂ ದಿನಾಂಕ 1.1.2014 ರಿಂದ 31.12.2015ರವರೆಗೆ ಹೆಚ್ಚುವರಿ ಪ್ರಕ್ರಿಯೆಯಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 877 ಖಾಲಿ ಹುದ್ದೆಗಳನ್ನು (ವಿಶೇಷ ಶಿಕ್ಷಕರುಗಳನ್ನು ಹೊರತುಪಡಿಸಿ) ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಲಾಗಿದೆ.

ಮೇಲೆ ಕ್ರಮಾಂಕ (3) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರಾಜ್ಯ ಖಾಸಗಿ ಅನುದಾನಿತ ಪದವಿ ಪೂರ್ವ ಕಾಲೇಜುಗಳಲ್ಲಿ ದಿನಾಂಕ 31.12.2015ರವರೆಗೆ ನಿವೃತ್ತಿ, ನಿಧನ, ರಾಜೀನಾಮೆ, ಸಕ್ಷಮ ಪ್ರಾಧಿಕಾರದಿಂದ ಅನುಮೋದಿತವಾದ ಬಡ್ತಿ ಮೂಲಕ ತೆರವಾದ ಮತ್ತು ಇತರ ಕಾರಣಗಳಿಂದ ತೆರವಾದ ಅನುದಾನಿತ ಖಾಲಿ ಹುದ್ದೆಗಳನ್ನು ತುಂಬಿಕೊಳ್ಳಲು ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಲಾಗಿದೆ. ಅನುದಾನಿತ ಪ್ರೌಢಶಾಲೆಗಳಲ್ಲಿನ ಶಿಕ್ಷಕರುಗಳ ಕಾರ್ಯಭಾರವನ್ನು ಪುನರ್ ಪರಿಶೀಲಿಸಬೇಕಾಗಿರುವುದರಿಂದ ಹಾಗೂ ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ/ ಹಾಜರಾತಿಗೆ ಅನುಗುಣವಾಗಿ ಶಿಕ್ಷಕರ ನೇಮಕಾತಿ/ ಅನುಮೋದನೆಯನ್ನು ಗಮನದಲ್ಲಿಟ್ಟುಕೊಂಡು ಅಕರಣೀಕರಗೊಳಿಸಬೇಕಾಗಿರುವುದನ್ನು ಮನಗಂಡು ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ನಿವೃತ್ತಿ, ರಾಜೀನಾಮೆ, ಮರಣ, ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ: 31.12.2014ರವರೆಗೆ ಖಾಲಿಯಾದ ಬೋಧಕ ಹುದ್ದೆಗಳನ್ನು (ವೃತ್ತಿ/ ಚಿತ್ರಕಲಾ/ ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಭರ್ತಿ ಮಾಡಲು ಅನುಮತಿ ನೀಡಲು ಸರ್ಕಾರವು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

### ಸರ್ಕಾರಿ ಆದೇಶ ಸಂಖ್ಯೆ: ಇಡಿ14 ಎಸ್ಇಪಿ2017, ಬೆಂಗಳೂರು, ದಿನಾಂಕ: 29 ಜೂನ್,2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ, ಅನುದಾನಿತ ಖಾಸಗಿ ಪ್ರೌಢಶಾಲೆಗಳಲ್ಲಿ ನಿವೃತಿ, ರಾಜೀನಾಮೆ, ಮರಣದಿಂದ ಖಾಲಿಯಾದ ಹುದ್ದೆಗಳನ್ನು ಹಾಗೂ ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ ದಿನಾಂಕ 31.12.2012ರವರೆಗೆ ಖಾಲಿಯಾದ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯುಲ್ಲಿ ಬಳಸಿಕೊಂಡ ನಂತರ ಬಾಕಿ ಬಳಿದ 1476 ಬೋಧಕ ಹುದ್ದೆಗಳನ್ನು ಹಾಗೂ ದಿನಾಂಕ 1.1.2013 ರಿಂದ 31.12.2014ರವೆಗೆ ಖಾಲಿಯಾದ ಹುದ್ದೆಗಳನ್ನು ಹೆಚ್ಚುವರಿ ಪ್ರಕ್ರಿಯೆಯುಲ್ಲಿ ಬಳಸಿಕೊಂಡ ನಂತರ ಬಾಕಿ ಉಳಿದ 1275 ಬೋಧಕ ಹುದ್ದೆಗಳನ್ನು (ವೃತ್ತಿ/ಚಿತ್ರಕಲಾ/ ಸಂಗೀತ ಮುಂತಾದ ವಿಶೇಷ ಶಿಕ್ಷಕರನ್ನು ಹೊರತುಪಡಿಸಿ) ಭರ್ತಿ ಮಾಡಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟ ಆರ್ಥಿಕ ಮಿತವ್ಯಯ ಸಡಿಲಿಸಿ ಅನುಮತಿ ನೀಡಲಾಗಿದೆ.

1. ಮೇಲ್ಕಂಡ ಖಾಲಿ ಹುದ್ದೆಗಳ ಭರ್ತಿ ಅನುಮೋದನೆಯು ವಿಷಯ ಶಿಕ್ಷಕರುಗಳಿಗೆ ಮಾತ್ರ ಅನ್ವಯಿಸುತ್ತದೆ.
2. ನಿರ್ದಿಷ್ಟ ಖಾಲಿ ಹುದ್ದೆಯು(ನಿವೃತ್ತಿ, ರಾಜೀನಾಮೆ, ಮರಣ,

ಪುಟ 9 ಕ್ಕೆ ➤

➢ ಪುಟ 8 ರಿಂದ..... ಕರ್ನಾಟಕ ಸರ್ಕಾರದ ನಡವಳಿಗಳು...

ಸೂಕ್ತ ಪ್ರಾಧಿಕಾರದ ಅನುಮೋದನೆ ಪಡೆದು ಬಡ್ತಿ ಹೊಂದಿರುವ ಹಾಗೂ ಇತರೆ ಕಾರಣಗಳಿಂದ) ಮೂಲತಃ ಅನುದಾನಿತ ಹುದ್ದೆಯಾಗಿರತಕ್ಕದ್ದು.

3. ಅರ್ಹತೆ, ವಿದ್ಯಾರ್ಹತೆ, ಮೀಸಲಾತಿ ಇತ್ಯಾದಿ ಮಾನದಂಡ ಗಳನ್ನು ಪಾಲಿಸಿ ಪಾರದರ್ಶಕವಾಗಿ ಆಯ್ಕೆ ಪ್ರಕ್ರಿಯೆಯನ್ನು ನಡೆಸತಕ್ಕದ್ದು. ಮೇಲಿನ ವಿವರಗಳನ್ನು ಖಚಿತಪಡಿಸಿಕೊಂಡ ನಂತರವೇ ಸಕ್ಷಮ ಪ್ರಾಧಿಕಾರವು ಅನುಮೋದಿಸತಕ್ಕದ್ದು.
4. ಸಂಬಂಧಿಸಿದ ಅನುದಾನಿತ ಶಾಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು (Regular Candidates only) ಕಳೆದ 5 ಶೈಕ್ಷಣಿಕ ವರ್ಷಗಳ ಜಿಲ್ಲಾ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು.
5. ಸಂಬಂಧಿಸಿದ ಅನುದಾನಿತ ಶಾಲೆಯ ಕನಿಷ್ಠ ಮಕ್ಕಳ ಹಾಜರಾತಿಯನ್ನು ಕಡ್ಡಾಯವಾಗಿ ಹೊಂದಿರಬೇಕು ಮತ್ತು ಈ ಹಾಜರಾತಿ/ ದಾಖಲಾತಿ ನಿಗಧಿತ ಮಟ್ಟದಲ್ಲಿರುವುದನ್ನು Student Tracking system ರನ್ವಯ ಖಚಿತಪಡಿಸಿಕೊಳ್ಳತಕ್ಕದ್ದು.
6. ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ವಿದ್ಯಾರ್ಥಿಗಳ ದಾಖಲಾತಿ/ ಹಾಜರಾತಿಗೆ ಅನುಗುಣವಾಗಿ ಶಿಕ್ಷಕರ ನೇಮಕಾತಿ/ಅನುಮೋದನೆಯನ್ನು ಗಮನದಲ್ಲಿಟ್ಟುಕೊಂಡು ಅಕರಣೀಕರಣ (Rationalisation) ಗೊಳಿಸುವುದು;
7. ಶಾಲೆಯ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
8. ಖಾಲಿ ಹುದ್ದೆ ಭರ್ತಿಯಲ್ಲಿ ಸರ್ಕಾರವು ನಿಗದಿಪಡಿಸಿರುವ ಮೀಸಲಾತಿ ನಿಯುವಮಾವಳಿಯುಡಿಯುಲ್ಲಿ ಭರ್ತಿ ಮಾಡತಕ್ಕದ್ದು.
9. ಶಿಕ್ಷಕರ ಹುದ್ದೆಗೆ ಆಯ್ಕೆಗೊಂಡ ಅಭ್ಯರ್ಥಿಯು ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ಅಧಿಸೂಚನೆ ಸಂಖ್ಯೆ: ಇಡಿ 219 ಎಲ್‌ಬಿಪಿ 2015, ದಿನಾಂಕ 29.9.2016ರಲ್ಲಿ ನಿಗದಿ ಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.
10. ಖಾಸಗಿ ಅನುದಾನಿತ ಪ್ರೌಢಶಾಲೆಗಳಲ್ಲಿ ತೆರವಾದ ಬೋಧಕ ಹುದ್ದೆಗಳ ನೇಮಕಾತಿಯನ್ನು ಅನುಮೋದಿಸಲು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು ಸಕ್ಷಮ ಪ್ರಾಧಿಕಾರಿ ಯಾಗಿರುತ್ತಾರೆ.
11. ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ ಮತ್ತು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು 1999 ಹಾಗೂ ಅವುಗಳಿಗೆ ಮಾಡಲಾದ ತಿದ್ದುಪಡಿ ನಿಯಮಗಳನ್ವಯ ಮತ್ತು ಕರ್ನಾಟಕ ಶಿಕ್ಷಣ ಅಧಿನಿಯಮ. 1983ರಲ್ಲಿನ ಸೂಚನೆಗಳನ್ವಯ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ನಡೆಸಿರುವುದನ್ನು ಖಚಿತಪಡಿಸಿಕೊಂಡ ನಂತರವೇ ಆಯುಕ್ತರು/ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ನೇಮುಕಾತಿಯುನ್ನು ಅನುಮೋದನೆಗಾಗಿ ಸರ್ಕಾರದ ಆದೇಶ ಸಂಖ್ಯೆ: ಇಡಿ77 ಎಸ್‌ಇಪಿ 2007 (ಭಾಗ) ದಿನಾಂಕ: 31.3.2008ರಲ್ಲಿ ನಿಗದಿಪಡಿಸಿರುವ ಪರಿಶೀಲನಾ ಪಟ್ಟಿಯಲ್ಲಿ (Check-list) ಭರ್ತಿ ಮಾಡಿದ ಮಾಹಿತಿಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.
12. ಈ ಆದೇಶವನ್ನು ಆರ್ಥಿಕ ಇಲಾಖೆಯು ಅನಧಿಕೃತ ಟಿಪ್ಪಣಿ ಸಂಖ್ಯೆ ಎಫ್‌ಡಿ 434 ವೆಚ್ಚ –8/2017, ದಿನಾಂಕ 19.6.2017ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

**ಕರ್ನಾಟಕದ ರಾಜ್ಯಪಾಲರ ಆಜ್ಞಾನುಸಾರ**
**ಮತ್ತು ಅವರ ಹೆಸರಿನಲ್ಲಿ**
**ಸಹಿ/– ಸರ್ಕಾರದ ಅಧೀನ ಕಾರ್ಯದರ್ಶಿ,**
**ಶಿಕ್ಷಣ ಇಲಾಖೆ (ಪ್ರೌಢಶಿಕ್ಷಣ)**

➢ ಪುಟ 3 ರಿಂದ..... ಎ.ಬಿ.ಆರ್.ಎಸ್.ಎಂ. ಮನವಿಗೆ...

ವಿಶ್ವವಿದ್ಯಾಲಯ ಈ ಹಿಂದೆ ಪೂರ್ವಸೇವೆ ಪರಿಗಣಿಸಲು ಒಪ್ಪಿತ್ತು. ಆದರೆ ಈಗ ಅದನ್ನು ರದ್ದುಪಡಿಸಿದೆ. ನಮ್ಮ ಆಗ್ರಹದ ಮೇರೆಗೆ ಸಚಿವಾಲಯುವು ವಿಷಯುದ ಸಂಬಂಧವಾಗಿ ನಿಷ್ಪಕ್ಷಪಾತವಾದ ಸವಿಸ್ತಾರ ವಿವರವನ್ನು ಸಲ್ಲಿಸಲು ಕೇಳಿದೆ. ನಾವು ಕೂಡಲೇ ಇದಕ್ಕೆ ಸಂಬಂಧಿಸಿದ ವಿವರಗಳನ್ನು ಸಲ್ಲಿಸಲಿದ್ದೇವೆ. ದೇಶದಲ್ಲಿರುವ ಎಲ್ಲ ಶಿಕ್ಷಕರ ಈ ಬೇಡಿಕೆಯನ್ನು ಕೇಂದ್ರ ಸರ್ಕಾರ ಈಡೇರಿಸುವುದೆಂದು ಆಶಿಸೋಣ.

11. ಗ್ರಂಥಪಾಲಕರು, ದೈಹಿಕ ಶಿಕಕರು, System analyst ಮತ್ತು ತತ್ಸಮ ಕೆಲಸಗಾರರ ಹುದ್ದೆಗಳ ತಾರತಮ್ಯ ನಿವಾರಣೆಯ ಬಗ್ಗೆಯುೂ ನಿಯೋಗವು ಬೇಡಿಕೆ ಸಲ್ಲಿಸಿದೆ. ಈ ಹುದ್ದೆಯಲ್ಲಿರುವವರು ನೇರ ತರಗತಿಗೆ ಸಂಬಂಧಿಸಿರುವುದಿಲ್ಲ ಹಾಗೂ ತರಗತಿಯ ಪಾಠಪ್ರವಚನಗಳಲ್ಲಿ ಭಾಗಿಗಳಲ್ಲ ಎಂಬ ಅಧಿಕಾರಿಗಳ ಆಕ್ಷೇಪಣೆಗೆ, ಅವರನ್ನು ತರಗತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿಲ್ಲ. ಈ ಕಾರಣಕ್ಕಾಗಿ ಅವರಿಗೆ ನೀಡಬೇಕಾದ ಸೌಲಭ್ಯಗಳನ್ನು ಅವರದಲ್ಲದ ತಪ್ಪಿಗಾಗಿ ತಡೆಹಿಡಿಯುವುದು ಸರಿಯಲ್ಲ ಎಂಬ ನಮ್ಮ ವಾದವನ್ನು ಮನ್ನಿಸಿ ಈ ಬೇಡಿಕೆಯುನ್ನು ಪುನರ್ ಪರಿಶೀಲಿಸುವುದಾಗಿ ಆಶ್ವಾಸನೆ ನೀಡಿರುತ್ತಾರೆ.
12. ಇದಲ್ಲದೆ ಶಿಕ್ಷಣದ ನಿಯಮಾವಳಿಗೆ ಸಂಬಂಧಿಸಿದಂತೆ ಅನೇಕ ವಿಷಯಗಳನ್ನು ಚರ್ಚಿಸಲಾಯಿತು. ಅದರಲ್ಲಿ ಹೆಚ್ಚಿನ ಅಂಶಗಳಿಗೆ ಒಪ್ಪಿಗೆಯನ್ನು ನೀಡಿದ್ದಾರೆ.

●

➢ ಪುಟ 5 ರಿಂದ..... ಸ್ತ್ರೀ ಶಕ್ತಿ...

ನೆರವು ಪಡೆಯುತ್ತ ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ಮೂಟೆಕಟ್ಟಿ ಒಗೆದು, ಮಕ್ಕಳ ಏಳಿಗೆಯೊಂದೇ ತನ್ನ ಗುರಿ ಎಂದು ಜೀವನ ನಡೆಸುತ್ತಿರುವುದನ್ನು ಕಂಡು ಅವಳ ಬಗ್ಗೆ ಅಭಿಮಾನ ಮೂಡುತ್ತಿತ್ತು. ಪದವಿ ತರಗತಿಗೆ ಬಂದ ಹುಡುಗ ತುಂಬ ಜಾಣ, ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ಗೆದ್ದು ತನ್ನ ಕಾಲ ಮೇಲೆ ನಿಲ್ಲುವ ಸಾಮರ್ಥ್ಯ ಪಡೆಯುವ ಹೊಸ್ತಿಲಲ್ಲಿದ್ದರೆ; ಹುಡುಗಿ ಪಿ ಯು ಸಿ ವಿಜ್ಞಾನ ವಿಭಾಗದಲ್ಲಿ ಉತ್ತಮವಾಗಿ ಅಭ್ಯಾಸ ಮಾಡುತ್ತಿದ್ದಾಳೆ. ಶಿಕ್ಷಕರು ತನ್ನ ಮಕ್ಕಳ ಬಗ್ಗೆ ಪ್ರಶಂಸೆಯ ನುಡಿಗಳನ್ನಾಡಿದರೆ ಆ ತಾಯಿಯ ಕಣ್ಣುಗಳು ಮಿಂಚುತ್ತವೆ. ತನ್ನ ಶ್ರಮ ಸಾರ್ಥಕವಾಗುತ್ತಿದೆಯೆಂಬ ಭಾವ ಆ ಕಣ್ಣುಗಳಲ್ಲಿ ಎದ್ದು ಕಾಣುತ್ತದೆ. ಇಂತಹ ತಾಯಂದಿರು ಪೂಜನೀಯರು ತಾನೆ? ಈಕೆಯ ಶ್ರಮಕ್ಕೆ ಈ ಆನಂದಕ್ಕೆ ಬೆಲೆ ಕಟ್ಟಲಾಗುವುದೇ?

ನಮ್ಮ ಸುತ್ತಮುತ್ತ ಇಂತಹ ನೂರಾರು ಸಾವಿರಾರು ಧೀರೆಯರು ಕಂಡುಬರುತ್ತಾರೆ. ರಸ್ತೆ ಕಟ್ಟಡಗಳ ಕಾಮಗಾರಿಯಲ್ಲಿ ಪುರುಷರಿಗೆ ಸರಿಸಮವಾಗಿ ತಮ್ಮ ಕಂದಮ್ಮಗಳನ್ನು ರಸ್ತೆಬದಿಯ ಮರಕ್ಕೆ ಜೋಲಿಯಲ್ಲಿ ಮಲಗಿಸಿ ದುಡಿಯುವ ಮಹಿಳೆಯರು, ಸ್ವಲ್ಪ ಕಡಿಮೆ ಬೆಲೆಗೆ ಹಣ್ಣು ತರಕಾರಿ ತಂದು ತಲೆಯ ಮೇಲೆ ಹೊತ್ತು, ಮನೆಮನೆ ಸುತ್ತಿ ಮಾರುವ ಅಥವಾ ಬೆಳಗ್ಗೆಯಿಂದ ರಾತ್ರಿಯವರೆಗೆ ರಸ್ತೆ ಬದಿಯಲ್ಲಿ ಕುಳಿತು, ಇಲ್ಲವೇ ತಳ್ಳುಗಾಡಿಯಲ್ಲಿ ತುಂಬಿಕೊಂಡು ಬೀದಿ ಬೀದಿ ಸುತ್ತಿ ಮಾರಾಟ ಮಾಡುತ್ತ ಕುಟುಂಬ ನಿರ್ವಹಣೆಯಲ್ಲಿ ಗಂಡನೊಂದಿಗೆ ಕೈಜೋಡಿಸಿ, ಮಕ್ಕಳನ್ನು ವಿದ್ಯಾವಂತರನ್ನಾಗಿಸಲು ಶ್ರಮಿಸುವ ದಿಟ್ಟ ಮಹಿಳೆಯರು ಎಷ್ಟು ಜನರಿಲ್ಲ? ಇಂತಹವರ ಶ್ರಮವನ್ನು ಯಾವ ತಕ್ಕಡಿಯಲ್ಲಿ ತೂಗಲಾದೀತು?

ಇನ್ನು ಮಧ್ಯಮವರ್ಗದ, ವಿದ್ಯಾವಂತ ಮಹಿಳೆಯರು ಕುಟುಂಬದ ಹಲವು ಹಂತಗಳ ಜವಾಬ್ದಾರಿಗಳೊಂದಿಗೆ ಕಾಲಮಾನಕ್ಕೆ ತಕ್ಕಂತೆ ಮನೆಯ ಹೊರಗೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ಜವಾಬ್ದಾರಿಯುತ ಸ್ಥಾನಗಳನ್ನೇ ಯಶಸ್ವಿಯಾಗಿ ನಿರ್ವಹಿಸಿಕೊಂಡು ಬರುತ್ತಿರುವವರಿಗೂ ಲೆಕ್ಕವಿಲ್ಲ. ಕುಟುಂಬದ ಒಳಗೂ ಹೊರಗೂ ಸವಾಲುಗಳನ್ನು ಎದುರಿಸುತ್ತಾ ಗೆಲುವಿನ ದಾರಿಯಲ್ಲಿ ನಡೆಯುತ್ತಿರುವವರು ಕುಟಂಬದ ಕೇಂದ್ರಬಿಂದುವೇ ಸ್ತ್ರೀ. ಶಕ್ತಿಯ ಅತ್ಯುನ್ನತ ನಿದರ್ಶನ ತಾಯಿ. ತೇನ್‌ಸಿಂಗ್ ಹೇಳುತ್ತಾನೆ "ನನ್ನ ತಾಯಿ ನನ್ನ ಸ್ಫೂರ್ತಿಯ ಚಿಲುಮೆ, ಆಕೆ ನನಗೆ ಹಿಮಾಲಯವನ್ನು ತೋರಿಸಿ 'ನೀನು ಅದನ್ನು ಏರಬಲ್ಲೆಯಾ? ಏರಬೇಕು ಎಂದು ಪ್ರತಿನಿತ್ಯ ಹುರಿದುಂಬಿಸುತ್ತಿದ್ದಳು. ಅದರಂತೆ ಪ್ರತಿನಿತ್ಯ ನನ್ನ ಮನಸ್ಸು ಹಿಮಾಲಯದ ತುತ್ತತುದಿಯನ್ನು ಏರುತ್ತಿತ್ತು" ಎಂದು. ಅದಕ್ಕೆ ಹೇಳುವುದು 'ಮಾತೃದೇವೋಭವ' ಎಂದು.

ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ತನ್ನನ್ನು ತಾನು ಸಮರ್ಥವಾಗಿ ತೊಡಗಿಸಿಕೊಳ್ಳುವ 'ಸ್ತ್ರಿ ಶಕ್ತಿ' ಗೆ ಸಾಷ್ಟಾಂಗ ನಮಸ್ಕಾರ.

●

➢ ಪುಟ 6 ರಿಂದ..... ವಚನಗಳಲ್ಲಿ ಮೌಲ್ಯ ...

ಅರಿತುಕೊಳ್ಳುವ ಅಗತ್ಯವನ್ನು ಅಂದೇ ಪ್ರತಿಪಾದಿಸಿದ್ದಾರೆ.

ಅಜ್ಞಾನಿಗಳ, ವಿಚಾರಶೂನ್ಯರ ಸಹವಾಸ ಮಾಡದೆ ಸಜ್ಜನರ ಜ್ಞಾನಿಗಳ ಸಹವಾಸ ಮಾಡುವುದು ಅಮೃತದ ಸವಿಗೆ ಹೋಲಿಸಿ

**ಅರಿಯದವರೊಡನೆ ಸಂಗವ ಮಾಡಿದರೆ**
**ಕಲ್ಲ ಹೊಯ್ದು ಕಿಡಿಯ ತೆಗೆದು ಕೊಂಬಂತೆ**
**ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣರ**
**ಸಂಗವ ಮಾಡಿದೊಡೆ ಕರ್ಪೂರಗಿರಿಯನು ಉರಿಕೊಂಬಂತೆ**

ಎನ್ನುತ್ತಾ ಶರಣರ ಸಾಂಗತ್ಯ ನಮ್ಮನ್ನು ಸನ್ಮಾರ್ಗದೆಡೆಗೆ ಔನ್ನತ್ಯದೆಡೆಗೆ ಕೊಂಡೊಯ್ಯುವ ದಿಶೆಯಲ್ಲಿ ತಿಳಿಸಿಕೊಟ್ಟಿದ್ದಾರೆ.

ಅನಾಚಾರ, ದುರಾಚಾರ, ಭ್ರಷ್ಟಚಾರ, ಅತ್ಯಾಚಾರಗಳೇ ಹೆಚ್ಚಾಗಿ ಸಾಮಾಜಿಕ ಜೀವನ ಮಾರ್ಗದೆಡೆಗೆ ಸಾಗುತ್ತಿರುವ ಸಮಾಜ ವಿನಾಶದತ್ತ ಸಾಗುತ್ತಿದೆ. ವಿನಾಶವಾಗದೆ ಉಳಿಯಬೇಕಾದರೆ ವಚನಕಾರರ ನಡೆ, ನುಡಿ ಆದರ್ಶಗಳನ್ನು ಮೈಗೂಡಿಸಿಕೊಂಡು 'ಸರ್ವೇಜನೋ ಸುಖಿನೋ ಭವಂತು' ಎಂಬ ನುಡಿಗೆ ಅನ್ವರ್ಥ ವಾಗಿ ಬದುಕೋಣ, ಭಾರತೀಯ ಜೀವನಮೌಲ್ಯಗಳನ್ನು ಉಳಿಸೋಣ. ●

# ಮುಖಪುಟ ಚಿತ್ರ ಪರಿಚಯ

**ಲೋಕಮಾನ್ಯ ತಿಲಕ್ :** 20ನೇ ಶತಮಾನದ ಆರಂಭದ ದಶಕದಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮದ ಅದ್ವಿತೀಯ ನಾಯಕರಾದ ಲೋಕಮಾನ್ಯ ತಿಲಕರು ಮಹಾರಾಷ್ಟ್ರದ ರತ್ನಾಗಿರಿಯಲ್ಲಿ 1856 ಜುಲೈ 26 ರಂದು, ಗಂಗಾಧರ ಪಂತ ಮತ್ತು ಪಾರ್ವತೀಬಾಯಿಯವರ ಸುಪುತ್ರನಾಗಿ ಜನಿಸಿದರು. ಸ್ವರಾಜ್ಯ ನನ್ನ ಜನ್ಮ ಸಿದ್ಧಹಕ್ಕು' ಎಂದು ಘೋಷಿಸಿದ ಅವರು, ಗಣೇಶನ ಹಬ್ಬವನ್ನು ನಾಡಹಬ್ಬವಾಗಿ ಪರಿವರ್ತಿಸುವ ಮೂಲಕ ಸಾಮಾನ್ಯ ಜನರಲ್ಲೂ ಸ್ವಾತಂತ್ರ್ಯದ ಕಿಚ್ಚನ್ನು ಹೊತ್ತಿದವರು. ಕೇಸರಿ ಪತ್ರಿಕೆ ಪ್ರಾರಂಭಿಸಿ ಅದರಲ್ಲಿ ಬರೆದ ಲೇಖನಗಳಿಗಾಗಿ 1098ರಲ್ಲಿ ಬರ್ಮಾದ ಮಾಂಡೇಲಿ ಜೈಲಿನಲ್ಲಿ 6 ವರ್ಷ ಕಠಿಣ ಸಜೆ ಅನುಭವಿಸುತ್ತಾ 'ಗೀತಾರಹಸ್ಯ' ಪುಸ್ತಕ ಬರೆದರು. ಹಿಂದಿಯನ್ನು ದೇವನಾಗರಿಯಲ್ಲಿ ಬರೆಯಬೇಕು, ಹಿಂದಿಯನ್ನು ರಾಷ್ಟ್ರ ಭಾಷೆಯಾಗಿ ಸ್ವೀಕರಿಸಬೇಕೆಂದು ಪ್ರಪ್ರಥಮ ನಾಯಕ ತಿಲಕರು 1620 ಆಗಸ್ಟ್ 1 ರಂದು ಮುಂಬಯಿಯಲ್ಲಿ ಚಿರ ವಿಶ್ರಾಂತಿ ಪಡೆದರು.

**ಉಧಮ್ ಸಿಂಗ್ :** 1919ರಲ್ಲಿ ನಡೆದ ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ನೋಡಿದ 20ರ ಯುವಕ ಉಧಮ್ ಸಿಂಗ್ ಪ್ರತೀಕಾರದ ಪ್ರತಿಜ್ಞೆ ಕೈಗೊಂಡ. ಕಷ್ಟ ಪಟ್ಟು ಹಣ ಕೂಡಿಸಿ ಇಂಗ್ಲೆಂಡಿಗೆ ಹೋದ. ಹತ್ಯಾಕಾಂಡದ ಪ್ರಮುಖರಲ್ಲಿ ಒಬ್ಬನಾದ ಡೈಯರ್ ಆ ವೇಳೆಗೆ ಮೃತನಾಗಿದ್ದ. 21 ವರ್ಷಗಳ ನಂತರ ಲಂಡನ್ನಿನ ಒಂದು ಸಭೆಯಲ್ಲಿ ಮೈಕೆಲ್ ಒ'ಡೈಯರ್‌ನನ್ನು ಉಧಮ್ ಸಿಂಗ್ ಗುಂಡಿಕ್ಕಿಕೊಂದು ಪ್ರತಿಜ್ಞೆ ಪೂರೈಸಿ ವಂದೇ ಮಾತರಂ ಮಂತ್ರ ಜಪಿಸುತ್ತಾ ಗಲ್ಲಿಗೇರಿ ಮಾತೆಯ ಚರಣಗಳಲ್ಲಿ ಸಮರ್ಪಿತ ಹೂವಾದ. ●

# ಶಿಕ್ಷಕ ಸಂಘಟನೆಯ ಭೀಷ್ಮ ಮುಕುಂದರಾವ್ ಕುಲಕರ್ಣಿ



ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಸಂಸ್ಥಾಪಕರು, ದೀರ್ಘಾವಧಿಯವರೆಗೆ ಮಹಾಸಂಘದ ಅಧ್ಯಕ್ಷರು ಮತ್ತು ಸಂಘಟನಾ ಮಂತ್ರಿಗಳಾದ ಮಾನವೀಯ ಮುಕುಂದರಾವ್ ಕುಲಕರ್ಣಿಯವರು ದಿನಾಂಕ 3 ಏಪ್ರಿಲ್ 2017 ರಂದು ಪುಣೆಯಲ್ಲಿ ದೈವಾಧೀನರಾದರು. ಇವರು ಮಾಧ್ಯಮಿಕ ವಿದ್ಯಾಲಯದಲ್ಲಿ ಶಿಕ್ಷಕರಾಗಿ ಸುಮಾರು ಒಂದು ದಶಕದವರೆಗೆ ಅಧ್ಯಾಪನ ಕಾರ್ಯಮಾಡುತ್ತಾ, ಮಹಾರಾಷ್ಟ್ರ ರಾಜ್ಯ ಶಿಕ್ಷಕ ಪರಿಷತ್‌ನಲ್ಲಿಯೂ ಕಾರ್ಯಾರಂಭ ಮಾಡಿದರು. ನಂತರ 1966–78 ರವರೆಗೆ ಎರಡು ಬಾರಿ ಮಹಾರಾಷ್ಟ್ರ ವಿಧಾನ ಪರಿಷತ್‌ನ ಸದಸ್ಯರಾಗಿದ್ದರು. ವಿಧಾನ ಪರಿಷತ್‌ನಲ್ಲಿ ಶಿಕ್ಷಕ ಕ್ಷೇತ್ರದ ಸದಸ್ಯರಾಗಿದ್ದರೂ ಜೀವನದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದರು. ಆ ಸಮಯದಲ್ಲಿ ಅವರೆಲ್ಲರೂ ಅವರ ವಿರುದ್ಧ ವಿಚಾರಧಾರೆಗಳನ್ನು ಹೊಂದಿದ್ದರೂ ಸಹ ಆಡಳಿತ ಪಕ್ಷದ ಎಲ್ಲಾ ಸದಸ್ಯರು ಮತ್ತು ಶಿಕ್ಷಣ ಮಂತ್ರಿಗಳೂ ಸಹ ಇವರ ಮಾತನ್ನು ಗಮನವಿಟ್ಟು ಕೇಳುತ್ತಿದ್ದರಿಂದ ಶಿಕ್ಷಕರ ಸಮಸ್ಯೆಗಳಿಗೆ ಸರಿಯಾದ ಪರಿಹಾರ ಸಿಗುತ್ತಿತು. ಇವರ ವ್ಯವಹಾರ ಅತ್ಯಂತ ಮಧುರುವಾಗಿದ್ದು ತಮ್ಮ ಅಭಿಪ್ರಾಯಗಳನ್ನು ತಾರ್ಕಿಕವಾಗಿ ಮಂಡಿಸುತ್ತಿದ್ದರು. ಮಾತುಗಾರಿಕೆಯಲ್ಲಿ ಸತ್ಯ ಮತ್ತು ತರ್ಕದೊಂದಿಗೆ ಎದುರಾಳಿಗಳನ್ನು ನಿರುತ್ತರರನ್ನಾಗಿ ಮಾಡಿಬಿಡುತ್ತಿದ್ದರು.

ಶಿಕ್ಷಕ ಮತ್ತು ವಿಧಾನ ಪರಿಷತ್ತಿನ ಸದಸ್ಯರಾಗಿದ್ದಾಗ ಮಹಾರಾಷ್ಟ್ರ ರಾಜ್ಯ ಶಿಕ್ಷಕ ಪರಿಷತ್‌ವತಿಯಿಂದ ಮಾಧ್ಯಮಿಕ ಶಿಕ್ಷಕ ಮಹಾ ಸಂಘದಲ್ಲಿ(AISTF) ಅಖಿಲ ಭಾರತ ಮಟ್ಟದಲ್ಲಿ ಕೆಲಸ ಮಾಡಲು ಪ್ರಾರಂಭಿಸಿದರು. ಈ ಸಂಘದಲ್ಲಿ ಅವರು ಅನೇಕ ಬಾರಿ ಮಹಾಮಂತ್ರಿ ಮತ್ತು ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಆದರೆ ಅವರಿಗೆ ಅಲ್ಲಿ ಸಮಾಧಾನ ಸಿಗಲಿಲ್ಲ. ಏಕೆಂದರೆ AISTF ನಲ್ಲಿ ಕೇವಲ ಶಿಕ್ಷಕರ ಆರ್ಥಿಕ ಒಳಿತಿಗಾಗಿ ಮಾತ್ರ ಪ್ರಯತ್ನ ಮತ್ತು ಪ್ರಯಾಸ ಪಡುತ್ತಿದ್ದರು. ಶಿಕ್ಷಣ ಮತ್ತು ರಾಷ್ಟ್ರದ ಸಮಸ್ಯೆಗಳಿಗೂ ಉತ್ತರ ಹುಡುಕುವುದರಲ್ಲಿ ಶಿಕ್ಷಕ ಸಂಘಟನೆಯು ಭೂಮಿಕೆ ಇರಬೇಕೆಂಬ ಇವರ ಅಭಿಪ್ರಾಯವನ್ನು ಯಾರೂ ಕೇಳಲು ಸಿದ್ಧರಿರಲಿಲ್ಲ. ಕೇವಲ ಶಿಕ್ಷಕರ ಹಿತಕ್ಕಾಗಿಯೇ ಕೆಲಸ ಮಾಡದೇ ಸಮಾಜ ಮತ್ತು ರಾಷ್ಟ್ರದ ಹಿತಕ್ಕಾಗಿಯೂ ಪ್ರಯತ್ನ ಪಡಬೇಕೆಂಬುದು ಮುಕುಂದರಾವ್‌ರವರ ಅಭಿಪ್ರಾಯವಾಗಿತ್ತು. ತಮ್ಮ ಉದ್ದೇಶಗಳಿಗೆ ಸಮಾಧಾನಕರ ಉತ್ತರ ಸಿಗದಿದ್ದಾಗ 7ನೇ ದಶಕದಲ್ಲಿ ಅಲ್ಲಿಂದಲೇ ಭಾರತೀಯ ಶಿಕ್ಷಣ ಮಂಡಲದ ಸ್ಥಾಪನೆ ಮಾಡಿ, ಸಂಸ್ಥೆಯ ಅಧ್ಯಕ್ಷ ಹುದ್ದೆಯನ್ನು ಅಲಂಕರಿಸಿದರು. ಶಿಕ್ಷಣ ಮಂಡಲದ ಸ್ಥಾಪನೆಯನ್ನು ಶಿಕ್ಷಣದ ರೀತಿ ನೀತಿಯ ಮೇಲೆ ವಿಚಾರ ಮಾಡುವ ಗುರಿಯೊಂದಿಗೆ ಪ್ರಾರಂಭಿಸಲಾಗಿತ್ತು. ಇದರಲ್ಲಿ ಶಿಕ್ಷಕರ ಹಿತವನ್ನು ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸುವ ಕಾರ್ಯಕರ್ತರ ಗುಂಪು ಕೈ ಜೋಡಿಸಿದರು.

ಕೇವಲ ಶಿಕ್ಷಕರ ಹಿತಕ್ಕಾಗಿ ಶಿಕ್ಷಣ ಮಂಡಲ ಕೆಲಸ ಮಾಡುವುದು ಅಸಂಭವವೆಂದು ನಂತರ ಅವರಿಗೆ ತಿಳಿಯಿತು. ಆದ್ದರಿಂದ ಬೇರೆ ಒಂದು ಸಂಘಟನೆಯ ಕಲ್ಪನೆ ಮಾಡಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಸ್ಥಾಪನೆ ಮಾಡಿದರು. ಮಾನವೀಯ ಮುಕುಂದರಾವ್ ಕುಲಕರ್ಣಿಯವರು ಈ ಸಂಘಟನೆಯ ಅಧ್ಯಕ್ಷರಾಗಿಯೂ ಕೆಲಸ ನಿರ್ವಹಿಸಿದರು. ನಂತರ ದೀರ್ಘಾವಧಿಯವರೆಗೆ ಸಂಘಟನಾ ಮಂತ್ರಿಗಳಾಗಿ ಕೆಲಸ ನಿರ್ವಹಿಸುತ್ತಾ ರಾಷ್ಟ್ರೀಯ ಮನೋಭಾವನೆ ಹೊಂದಿರುವ ಕಾರ್ಯಕರ್ತರೊಂದಿಗೆ ಸಂಪೂರ್ಣ ದೇಶದಲ್ಲಿ ನಿರಂತರ ಪ್ರವಾಸ ಮಾಡಿದರು.

ಬೇರೆ ಶಿಕ್ಷಣ ಸಂಸ್ಥೆಗಳ ಅಧ್ಯಯನ ಮತ್ತು ಅನುಭವದ ಆಧಾರದ ಮೇಲೆ ಶೈಕ್ಷಿಕ ಮಹಾಸಂಘಕ್ಕೆ ಪೂರ್ವ ಪ್ರಾಥಮಿಕ ಶಿಕ್ಷಣದಿಂದ ಉಚ್ಚ ಶಿಕ್ಷಣದವರೆಗೂ ಯಾರೂ ಬೇಕಾದರೂ ಸದಸ್ಯತ್ವ ಹೊಂದಬಹುದಾದ, ತಮ್ಮ ತಮ್ಮ ಸ್ತರಗಳಿಗೆ ಅನ್ವಯವಾಗುವಂತೆ ತಮ್ಮ ಸಮಸ್ಯೆ ಹಾಗೂ ಹಿತದ ಬಗ್ಗೆ ಚಿಂತನೆ ಮಾಡಲು ಒಂದು ಹೊಸ ರೂಪುರೇಷೆ ನೀಡಿದರು. ಪ್ರಾಥಮಿಕ, ಮಾಧ್ಯಮಿಕ, ಉಚ್ಚಶಿಕ್ಷಣ, ಮಹಿಳೆ ಮತ್ತು ಶಿಕ್ಷಕೇತರ ಸಂವರ್ಗಗಳೆಂಬ ಐದು ವರ್ಗಗಳನ್ನು ರಚಿಸಿದರು. ಅವರ ದೂರದರ್ಶಿತ್ವ ವಿಚಾರಧಾರೆಯ ಅತ್ಯುತ್ತಮ ಉದಾಹರಣೆಯೆಂದರೆ ಬೇರೆಯವರು ಮಹಿಳೆಯರನ್ನು ಮುಂದುವರೆಸುವ ಬಗ್ಗೆ ಯೋಚಿಸದೇ ಇರುವ ಸಮಯದಲ್ಲಿ ಶೈಕ್ಷಿಕ ಮಹಾಸಂಘದಲ್ಲಿ ಮಹಿಳಾ ಶಿಕ್ಷಕಿಯರಲ್ಲೂ ನೇತೃತ್ವದ ಭಾವನೆ ವಿಕಾಸಗೊಳ್ಳುವಂತೆ ವ್ಯವಸ್ಥೆ ಮಾಡಿದರು.

ಶೈಕ್ಷಿಕ ಮಹಾಸಂಘದ ಧ್ಯೇಯವಾಕ್ಯವೆಂದರೆ ರಾಷ್ಟ್ರದ ಹಿತಕ್ಕಾಗಿ ಶಿಕ್ಷಣ, ಶಿಕ್ಷಣದ ಹಿತಕ್ಕಾಗಿ ಶಿಕ್ಷಕ ಮತ್ತು ಶಿಕ್ಷಕರ ಹಿತಕ್ಕಾಗಿ ಸಮಾಜ. ಇದು ಅವರ ಯೋಜನೆ ಮತ್ತು ದೀರ್ಘ ಅನುಭವದ ಫಲವಾಗಿದೆ. ಈ ಧ್ಯೇಯ ವಾಕ್ಯವನ್ನು ಗಮನದಲ್ಲಿಟ್ಟುಕೊಂಡು ಕಾರ್ಯಕರ್ತರಿಗೆ ಯಾವಾಗಲೂ ಶಿಕ್ಷಕರ ಹಿತದ ಬಗ್ಗೆ ಚಿಂತಿಸುತ್ತಲೇ ಜೊತೆ ಜೊತೆಗೆ ರಾಷ್ಟ್ರೀಯತಾ ಭಾವನೆಯನ್ನು ಜಾಗೃತಗೊಳಿಸುವಲ್ಲಿ ನಿರಂತರ

ಪುಟ 12 ಕ್ಕೆ...

Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-07-2017 Date of Posting 20th or 21st of every month

ಪುಟ 11 ರಿಂದ... 

ಪ್ರಯತ್ನ ಮಾಡುವಂತೆ ಪ್ರೇರೇಪಿಸಿದರು. ಈ ಕಾರಣದಿಂದ ಶೈಕ್ಷಿಕ ಮಹಾಸಂಘದ ಕಾರ್ಯಕ್ರಮದೊಡನೆ ಇನ್ನೂ ಮುಖ್ಯ ಕಾರ್ಯಕ್ರಮಗಳನ್ನು ಜೋಡಿಸಿದರು. ಇವುಗಳಲ್ಲಿ ಸರ್ವಪ್ರಥಮವಾಗಿ ಪ್ರಮುಖವಾದದೆಂದರೆ ಪ್ರಾಚೀನತೆಯ ಬಗ್ಗೆ ಹೆಮ್ಮೆ ಮತ್ತು ಸಮ್ಮಾನದ ಭಾವನೆಯನ್ನು ಜಾಗೃತಗೊಳಿಸಲು ಯುಗಾದಿಯನ್ನು ಹೊಸ ವರ್ಷವನ್ನಾಗಿ ಆಚರಿಸಲು ನಿರ್ಧರಿಸಿದರು. ಏಕೆಂದರೆ ಹೊಸವರ್ಷದ ಜಾಗೃತಿ ಮೂಡಿಸಿ ಪ್ರಸಾರ ಮಾಡಬೇಕೆಂಬುದೇ ಅವರ ಉದ್ದೇಶವಾಗಿತ್ತು. ನಂತರ ಕೇವಲ ಶಿಕ್ಷಕರಿಗಲ್ಲದೇ ಸಮಾಜದ ದಾಯಿತ್ವವನ್ನು ಜಾಗೃತಗೊಳಿಸುವ ದೃಷ್ಟಿಯಿಂದ ಎರಡನೇ ಸ್ಥಾಯಿ ಕಾರ್ಯಕ್ರಮ ಕರ್ತವ್ಯಬೋಧ ದಿವಸವನ್ನು ಆಚರಿಸಲು ನಿರ್ಧರಿಸಿದರು. ಇದಲ್ಲದೇ ಸಮಯಕ್ಕನುಸಾರವಾಗಿ, ಸಂದರ್ಭಕ್ಕನುಸಾರವಾದ ವಿಷಯಗಳ ಮೇಲೆ ರಾಷ್ಟ್ರೀಯತೆಯನ್ನು ಜಾಗೃತಿಗೊಳಿಸುವ ದೃಷ್ಟಿಯಿಂದ ಸ್ವದೇಶಿ ಭಾವನೆಯ ಜಾಗೃತಿ, ರಾಷ್ಟ್ರೀಯ ಶಿಕ್ಷಣ ನೀತಿಯ ನಿರ್ಮಾಣ, ಶಿಕ್ಷಣದ ಅಧಿಕಾರ ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣದಂತಹ ವಿಷಯಗಳಿಗನುಸಾರವಾಗಿ ಕಾರ್ಯಕರ್ತರ ಯೋಚನೆ ಮತ್ತು ಸಮಾಜವನ್ನು ಪ್ರೇರೇಪಿಸುವಂತಹ ಕೆಲಸವನ್ನು ಮಾಡಿದರು. ಇವರ ನಿರಂತರ ಆಗ್ರಹದಿಂದ ಮಹಾಸಂಘ ಇಂದು ಶಿಕ್ಷಕರ ಸಮ್ಮಾನದಲ್ಲಿ ವೃದ್ಧಿ ಮತ್ತು ಶಿಕ್ಷಕರಿಗೆ ಗೌರವ ಸಲ್ಲಿಸಲು ಗುರುವಂದನಾ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

ಸಂಘಟನೆಗೆ ಸದೃಢವಾದ ಆರ್ಥಿಕ ಆಧಾರವನ್ನು ನೀಡಲು ಸತತವಾಗಿ ಪರಿಶ್ರಮಿಸಿದರು. ಇದೇ ಯೋಚನೆಯಿಂದ ಪುಣೆಯಲ್ಲಿ ಭೂಮಿಯನ್ನು ಖರೀದಿಸಿ ಶಿಕ್ಷಣ ಮಂಡಲ ಮತ್ತು ಶೈಕ್ಷಣಿಕ ಮಹಾಸಂಘದ ಕಾರ್ಯಾಲಯದ ಯೋಜನೆ ಮಾಡಿದರು. 75 ವರ್ಷಗಳು ಪೂರ್ಣಗೊಳ್ಳುತ್ತಿರುವ ಸಂದರ್ಭದಲ್ಲಿ ಕಾರ್ಯಕರ್ತರ ಆಗ್ರಹದ ಮೇರೆಗೆ ಅವರಿಗೆ ಅಭಿನಂದಿಸಲು ದೇಶದಾದ್ಯಂತ ಹಣ ಸಂಗ್ರಹಿಸಲು ಅನುಮತಿ ನೀಡಿದರು. ಸನ್ಮಾನ ನನಗಾದರೂ, ಹಣ ಶೈಕ್ಷಿಕ ಸಂಘದ್ದು ಎಂಬ ಸ್ಪಷ್ಟವಾದ ಯೋಚನೆಯಿತ್ತು. ಈ ದೃಷ್ಟಿಯಿಂದ ಸಂಘಟನೆಯನ್ನು ಬಲಪಡಿಸಲು ಆರ್ಥಿಕವಾಗಿ ಸ್ವಾವಲಂಬೀ ಮಾಡಲು ತಮ್ಮ ಸನ್ಮಾನವನ್ನು ನಿಮಿತ್ತಮಾಡಿಕೊಂಡರು. ಇಂದಿನ ಶೈಕ್ಷಿಕ ಮಹಾಸಂಘದ ದಿಲ್ಲಿ ಕಾರ್ಯಾಲಯದ ಭೂಮಿಯನ್ನು ಅವರ ಸನ್ಮಾನಕ್ಕೆಂದು ಸಂಗ್ರಹಿಸಿದ ಹಣದಿಂದಲೇ ಖರೀದಿಸಲಾಗಿದೆ.

ಜೀವನದ ಸಂಧ್ಯಾಕಾಲದಲ್ಲಿ ಅವರಿಗೆ ನಡೆದಾಡಲು ಕಷ್ಟವಾಗುತ್ತಿತ್ತು, ಕಿವಿ ಸಹ ಕೇಳಿಸುತ್ತಿರಲಿಲ್ಲ. ಹೀಗಾಗಿ ಶೈಕ್ಷಿಕ ಮಹಾಸಂಘದಲ್ಲಿನ ಎಲ್ಲಾ ಸಾಂಸ್ಥಿಕ ಜವಾಬ್ದಾರಿಗಳನ್ನು ಕಳಚಿಕೊಂಡರೂ, ಅದರ ಪುರೋಭಿವೃದ್ಧಿಗಾಗಿ ಸದಾ ಚಿಂತಿಸುತ್ತಿದ್ದರು. ಶೈಕ್ಷಿಕ ಮಹಾಸಂಘದ ಇಂದಿನ ಬಹುತೇಕ ಎಲ್ಲ ಪದಾಧಿಕಾರಿಗಳನ್ನು, ಸಂಘಕ್ಕೆ ಜೋಡಿಸಿದ, ಕಾರ್ಯಕರ್ತರನ್ನಾಗಿ ರೂಪಿಸಿ ಅವರನ್ನು ಧ್ಯೇಯ ಸಮರ್ಪಿತರನ್ನಾಗಿ ಮಾಡುವಲ್ಲಿ ದಿವಂಗತ ಮುಕುಂದರಾಯರ ಪಾತ್ರ ಅತಿ ಮಹತ್ವದ್ದು.

ಮುಕುಂದರಾವ್ ಕುಲಕರ್ಣಿಯವರ ತಂದೆಯವರು ಘನಾ ಬಳಿಯ ಧವೆ ಎಂಬ ಊರಿನಲ್ಲಿ ವಕೀಲರಾಗಿದ್ದರು. ಅವರ ಕಠೋರ ಅನುಶಾಸನದ ನೆರಳಿನಲ್ಲಿ ಮುಕುಂದರಾಯರು ಬೆಳೆದವರು. ತಂದೆಯವರ ಆಗ್ರಹದಂತೆ ಗರಡಿ ಮನೆಗೆ ಸಾಮು ಮಾಡಲು ಹೋಗುತ್ತಿದ್ದರು. ಇದು ಅವರಿಗೆ ಉತ್ತಮವಾದ ವ್ಯಕ್ತಿತ್ವ ರೂಪಿಸಿಕೊಳ್ಳಲು ನೆರವಾಯಿತು. ಅವರ ತಂದೆಯವರು ಆರ್.ಎಸ್.ಎಸ್.ನ ಸಂಸ್ಥಾಪಕರಾದ ಡಾ॥ ಹೆಡಗೇವಾರ್‌ರ ಸಂಪರ್ಕದಲ್ಲಿ ಬಂದು ಸಂಘಚಾಲಕರಾಗಿ ಜವಾಬ್ದಾರಿ ನಿರ್ವಹಿಸತೊಡಗಿದ್ದಾಗ, ಬಾಲ್ಯದಲ್ಲೇ ಮುಕುಂದರಾಯರಿಗೆ ಸಂಘದ ಸ್ವಯಂಸೇವಕರಾಗಿ ಎಲ್ಲ ಬಗೆಯ ಸಂಸ್ಕಾರ ಪಡೆಯುವ ಭಾಗ್ಯ ಪ್ರಾಪ್ತಿಯಾಯಿತು. ಅಧ್ಯಯನ ಹಾಗೂ ಅಧ್ಯಾಪನಕ್ಕಾಗಿ ಅವರು ಪುಣೆ ನಗರಕ್ಕೆ ಬಂದು ಸಂಘಕಾರ್ಯದ ಮೂಲಕ ರಾಷ್ಟ್ರ ಕಾರ್ಯಕ್ಕಾಗಿ ತಮ್ಮ ಜೀವನವನ್ನು ಸಮರ್ಪಿಸಿಕೊಳ್ಳುವ ಸಂಕಲ್ಪ ಮಾಡಿದರು ತಾವು ಸ್ವೀಕರಿಸಿದ ಸಂಕಲ್ಪವನ್ನು ಜೀವನಪೂರ್ತಿ ನಿಭಾಯಿಸುತ್ತಾ ಎಲ್ಲ ಶಿಕ್ಷಕರಿಗೆ ಮೇಲ್ಪಂಕ್ತಿಯನ್ನು ಹಾಕಿದರು.

– ಶ್ರೀ ಹೆಚ್. ನಾಗಭೂಷಣ ರಾವ್

IF UNDELIVERED
PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 080-23466495
Printed at : RASHTROTTHANA MUDRANALAYA
Bangalore - 560 019.

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com